# HINDI SHIKSHAK EXAMINATION

## INTRODUCTION:-

Government of Karnataka accepted the policy of providing full encouragement for the Teaching of Hindi, the National language. Provision has been made for teaching of Hindi in the schools under three language formula. Special training facilities for Pre Hindi teachers were made available in Hindi Shikshak training Colleges in State.

Hindi ShikShak Examination provides good opportunities to secure jobs as Hindi Teachers in Aided, Unaided and Govt High Schools in the State. Hindi Shikshak Examinationis Conducted by Board since1985. The regular students of the formal system of education may enter Hindi Shikshak Training colleges in order to complete their Hindi BEd. KSEEB will conduct examination, evaluation, announcing results, issue of marks cards and other related services like duplicate/ triplicate marks card/pass certificates and verification of marks card.

As per Govt order NO: ED 259.SLB.1985 Dated: 17.10.1987Hindi Shikshak Examination is equivalent to B.Ed. examination.

**A FEW IMPORTANT AIMS AND OBJECTIVES OF HINDISHIKSHAK COURSE**

To trainTrainees to enable them to seek employment in High schools of Karnataka, Hindi Vidyalayas aided by Government and run by the voluntary Hindi Organizations in Karnataka.

The main object of the Hindi Shikshak training course is to train the Trainees to teach Hindi as I, II and III Languages in High schools and hence to equip them with a good grounding of Hindi language and literature, phonetics, philology, literary criticism, prosody, grammar and modern trends in Hindi literature and also comparative study of Hindi with Kannada and professional subjects.

**EXAM SESSIONS**

Hindi Shikshak examination is conducted once in a yearduring the month of May. forboth fresh students and repeaters.

## CLASSIFICATION OF STUDENTS

**FRESHER:-**A student taking up Hindi Shikshak Examination for the First time.There are 09 Theory papers out of which 08 papers are Compulsory for all and Trainees can select History or Geography or Kannada as the 9th Paper. Duration of each Paper will be three hours.

**REPEATER** :-Failed Candidate who attempts Consequently is considered as repeater candidate, he will be given 04 attempts to complete the course including first attempt. If does not pass he has to take exam in all subjects during next academic year.

## DURATION OF THE COURSE AND OTHER DETAILS

- The course of study for Hindi Shikshak training shall extend over one academic year comprising not less than 220 working days. Course commences from the 1st July of each year and ends on the 30th April of the following year.
- Hindi Shikshak Exam Comprises of theory Paper under group A and 2 Practical lessons, class work relating to observation of lesson under Group B.
- The Internal Assessment under Group A is based on the marks of assignments, Monthly test and half yearly Examinations.
- The Preliminary assessment of marks in Practical skill in Teaching under Part B shall be done formative assessment by College lecturers on the basis of candidate's practice of teaching during the period of training. The candidate shall prepare two sets of teaching aids in each of two special subjects which should be used in practice teaching in the class.

## ELIGIBILITY FOR ADMISSION

- A candidate for the Hindi Shikshak training course should have completed 21 years of age, passed a Hindi Degree Examination of voluntary Hindi Organization's recognized by the central as well as State Governments as equivalent to Bachelor Degree.
- A candidate for the HSTC should have passed the Bachelor's Degree in Arts, Science or commerce of any statuary University with Hindi as First language, Major or optional subject.
- A candidate for the HSTC should have passed any other Hindi Examination conducted by central or State government as Equivalent to B.A standard (like Hindi Vidwan of Karnataka) as per Govt Order No: ED 59 LHN 85, dated the 6th September 1985, Bangalore.

**No of Attempts for Any Candidate**

Any candidate who takes up Hindi Shikshak examination for the first time should pass the Examination in 04 consecutive examinations including the first appearance as per the Govt Order No: ED 219 SLB 2013 Dated : 26.05.2015, failing which the marks scored in the subjects for which the candidate had appeared and passed shall stand cancelled and the marks secured in those previous attempts in all such subjects shall be deemed to have been impounded and he shall re-appear for be entire Examination of all Papers as a fresh candidates.

Provided, that in cases where the candidate cannot take up the Examination in consecutive attempts for reasons like, illness, hospitalization or not in station etc., but the total number of attempts shall not exceed 04 consecutive Examinations commencing from the first examination and such candidate may be allowed to appear for the Examination.

**Approval list from Director Minority**

Colleges who wish to enroll their students for Hindi Shikshak Exam have to submit a list of students admitted to the Director Minority languages. They verify the details of students as per rules and approve a list of students who are eligible to take up the exam. Approved lists are sent to the Board for further exam procedure.

**Time for receiving applications and fees.**

The Examination fee will be collected from the students in the month of February every year. Fees will be collected from regular, fresh as well as repeater students by concerned institutions.

## Annual Registration fee

Every college presenting candidates for the examination shall pay to the Board of examination Rs.1000-00 per year whether the institutions belongs to Government, aided or unaided. This fee may be met out of the contingent fund of the colleges and remitted to KSEEB Bengaluru in the month of February each year.

## New School code

Every recognized institution including Government Hindi Shikshak College shall invariably register their institutions in the registers of the Karnataka Secondary Education Examination Board and obtain school code by submitting necessary documents that may be prescribed by the board from time to time. Institution not getting school code shall not be eligible to send the applications. Application to obtain new school code along with the prescribed fees, documents shall be submitted to the Examination board before 31st of July every year.

**PRE EXAMINATION ACTIVITIES**

**Following are the pre-examination activities:**

1. Notification Regarding Exam Fees and Other Information
2. Preparation of Timetable
3. OMR indenting
4. Student number generation for fresher
5. Repeater data extraction
6. Centre Allocation.
7. Registration number generation.
8. Generation of Hindi Shikshak Institution-wise nominal roll
9. Generation of Hindi ShikshakPhoto, Center Nominal roll
10. Generation of Center-wise Nominal roll
11. Admission Ticket printing data generation
12. Question paper requirement estimation
13. Answer paper requirement estimation
14. Collecting list of Chief superintendent and custodians from DIET Principal
15. Collecting list of Nodal officersfrom DIET Principal
16. Distribution of Admission Tickets, Center Nominal Roll, Answer Scripts and Other Stationery needed for Exam
17. Fixing of valuation centers
18. Question Paper is sent to centers through DIETS
19. Paper allocation to evaluation camps

## Fees Structure

| SL No | SUBEJECT DETAILS | EXAM FEES |
|---|---|---|
| 1 | Hindi Shikshak Course for all the subjects | Rs.900-00 |
| 2 | Hindi Shikshak Course for repeater for one subjects | Rs.150-00 |

## Passing Criteria:

1. No candidate shall be declared to have passed unless he/she obtain not less than 40% of marks in the aggregate, i.e., minimum of 360 out of 900 in group "A" and not less than 40% of marks in aggregate, i.e.,. the minimum of 120 out of 300 marks under group "B"
2. Further, no candidate should be declared to have passed unless he/she obtains a minimum of 28 marks out of 80 marks fixed under external Assessment in each subject under Group A subject to the condition that he/she shall obtain not less than 35% of marks in each subject both internal and external assessment put together, under group A to be eligible for pass.
3. Further he/she should obtain not less than 35% of marks in the practical examination in each than 35% of marks in the practical examination in each of the two subjects of his/her methods of teaching.
4. There shall be no minimum for the internal assessment.

**DURING EXAMINATION :-**

Hindi Shikshak Exam is conducted for 9 days as per the Time table already fixed by the Board. Exams are conducted under the supervision of DIET Principals by the Senior and Junior Lecturers of various DIETs who are deputed as chief superintendents and custodians of various exam centers. DIET Principals make teams of squads (Sitting and flying) to curb any mal practices if any. Chief Superintendents and custodians get the question paper one hour earlier to exam from the treasury or police Station. Answer paper bundles are sent to the camp officers address on the same day itself through insured post. Chief Superintendent has to send the absentee Statement, Center Nominal Roll to the concerned Section after completion of all the exams.

**OST EXAMINATION ACTIVITIES :-**

1. Preparation of JCE, DCE and AE list and send Circulars to lecturers by post
2. Paper valuation in evaluation camps
3. Entry of Marks in Attendance cum marks list (AML) and Evaluation
4. Shifting of answer papers to board
5. Result Announcement
6. Retotaling, Xerox of Answer Scripts and Revaluation
7. Printing of Marks Card and Despatching to the Institutions

**Publication of results**

The final results shall be approved and published by the secondary Education Examination Board soon after the results are processed.

In any case where it is found that the result of the Examination has been affected by error, Director of the Board (Other Exams) shall have power to amend such result in such manner as shall be in Conformity with the true position and to make such declaration as he may consider necessary in the behalf, provided that no result of such cases shall be amended after the expiry of 60 days from the date of publication of the results.In any case where it is found that the result of the examination has been affected by malpractice , fraud, improper conduct, the Board shall have power to amend such result in such manner as it deems fit even after the expiry of 60 days.

**PRESCRIBED FEES FOR RETOTALING, XEROX, AND REVALUATION**

| | |
|---|---|
| Retotaling of answer scripts (Per Subject) | Rs-150-00 |
| Photo Copy of answer scripts (Per Subject) | Rs-300-00 |
| Revaluation of answer scripts (Per Subject) | Rs-700-00 |

- Student can apply either for Retotaling or Xerox copy of answer scripts. They cannot apply for both. Student cannot apply for revaluation directly.
- Amount should be paid through NEFT Challan in any of the nationalized banks and original NEFT challan copy should be sent to board.

## HINDI SHIKSHAK EXAMINATION SUBJECTS AND CODES EXISTING

| SUBJECT NAME | SUBJECT CODE | | MAX MARKS | MIN MARKS | AGGREGATE FOR PASSING |
|---|---|---|---|---|---|
| **GROUP-A THEORY** | | | | | |
| Principles & Practice of Education | HD-01 | Internal | 20 | - | 40% |
| | | External | 80 | 28 | |
| Educational Psychology Measurement & Evaluation | HD-02 | Internal | 20 | - | |
| | | External | 80 | 28 | |
| School Organization & Management | HD-03 | Internal | 20 | - | |
| | | External | 80 | 28 | |
| Hindi Poetry | HD-04 | Internal | 20 | - | |
| | | External | 80 | 28 | |
| Hindi Prose | HD-05 | Internal | 20 | - | |
| | | External | 80 | 28 | |
| Linguistics | HD-06 | Internal | 20 | - | |
| | | External | 80 | 28 | |
| History of Literature & Principles of Literary Criticism | HD-07 | Internal | 20 | - | |
| | | External | 80 | 28 | |
| Teaching Special Subject (Hindi) | HD-08 | Internal | 20 | - | |
| | | External | 80 | 28 | |
| Teaching Special Subject (History) Geography/Kannada) | HD-09/10 | Internal | 20 | - | |
| | | External | 80 | 28 | |

| GROUP-B : PRACTICE IN TEACHING | | | | | |
|---|---|---|---|---|---|
| Lesson in Special Subject (Hindi) | HD-11 | | 100 | 35 | |
| Lesson in Special Subject (History/Geography/Kannada) | HD-12 | | 100 | 35 | 40% |
| Class work relating to Observation of Lesson | HD-13 | | 100 | 35 | |

**Result Statistics of Hindi Shikshak Exam May 2015**

| Exam | No Appeared | No Passed | Pass Percentage |
|---|---|---|---|
| Hindi ShikShak | 568 | 477 | 83.98 |

## ANNEXURES

Notification and Other Circulars related to Hindi ShikShak Exams

# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ

**6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560 003.**

ಸಂಖ್ಯೆ:ಡಬ್ಲ್ಯೂ2/ಹಿಂ.ಶಿ.ಪ/ಮೇ2015/ 32/2014–15ದಿನಾಂಕ: 19.02.2015

**ಅಧಿಸೂಚನೆ**

**ವಿಷಯ**: ಮೇ 2015ನೇ ಸಾಲಿನಲ್ಲಿ ನಡೆಯಲಿರುವ ಹಿಂದಿ ಶಿಕ್ಷಕ್ ಪರೀಕ್ಷೆಗೆ ಪರೀಕ್ಷಾ ಶುಲ್ಕ ಪಾವತಿ ಹಾಗೂ ಪರೀಕ್ಷಾರ್ಥಿಗಳ ನಾಮಪಟ್ಟಿ ಸಲ್ಲಿಸುವ ಬಗ್ಗೆ.
**ಉಲ್ಲೇಖ**: ಪತ್ರ ಸಂಖ್ಯೆ:ಎಂಸಿ7/ಹಿಂದಿ/ಸಿಪಿಐ/ಬಿಎಂ 180ತಪ/2014 ದಿನಾಂಕ:11.02.2015

*****

2015ನೇ ಸಾಲಿನ ಮೇ ತಿಂಗಳಲ್ಲಿ ನಡೆಯಲಿರುವ ಹಿಂದಿ ಶಿಕ್ಷಕ್‌ಪರೀಕ್ಷೆಗೆ ಕುಳಿತುಕೊಳ್ಳಲು ಇಚ್ಚಿಸುವ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಕರೆಯಲಾಗಿದೆ. ಪ್ರಾಚಾರ್ಯರುಗಳು ಅಭ್ಯರ್ಥಿಗಳಿಂದ ಪರೀಕ್ಷಾ ಶುಲ್ಕವನ್ನು ನಿಗದಿತ ದಿನಾಂಕದೊಳಗೆ ಪಡೆದು ಅದೇ ದಿವಸ ಅಥವಾ ಮರುದಿನವೇ ಯಾವುದಾದರೂ ರಾಷ್ಟ್ರೀಕೃತ ಬ್ಯಾಂಕಿನಲ್ಲಿ NEFT ಚಲನ್ ಮೂಲಕ ಜಮಾ ಮಾಡಿ, ಚಲನ್ ಮೂಲ ಪ್ರತಿಯೊಂದಿಗೆ 2014–15ನೇ ಸಾಲಿಗೆ ದಾಖಲಾಗಿರುವ ಅಭ್ಯರ್ಥಿಗಳ ವಿವರಗಳನ್ನೊಳಗೊಂಡ ನಾಮಪಟ್ಟಿ, ಭರ್ತಿ ಮಾಡಿದ ಓ.ಎಂ.ಆರ್, ಅನುತ್ತೀರ್ಣ ವಿದ್ಯಾರ್ಥಿಗಳ ಎಂ.ಎಸ್.ಎ ಸಮೇತ ಸಹಾಯಕ ನಿರ್ದೇಶಕರು, (ಹಿಂದಿ ಶಿಕ್ಷಕ್ ವಿಭಾಗ, ಇತರೇ ಪರೀಕ್ಷೆಗಳು), ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003, ಈ ವಿಳಾಸಕ್ಕೆ ತಲುಪುವುಂತೆ ಮಂಡಳಿಗೆ ಕಳುಹಿಸತಕ್ಕದ್ದು. ನಿರ್ದೇಶಕರು, ಉರ್ದು ಮತ್ತು ಇತರೆ ಅಲ್ಪ ಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ ಇವರಿಂದ ದಾಖಲಾತಿ ಅನುಮೋದನೆ ಆಗದ ವಿದ್ಯಾರ್ಥಿಗಳ ಹೆಸರನ್ನು ಸಂಸ್ಥೆಯವರು ಯಾವುದೇ ಕಾರಣಕ್ಕೂ ನಾಮಿನಲ್ ರೋಲ್‌ನಲ್ಲಿ ಭರ್ತಿ ಮಾಡಕೂಡದು ಹಾಗೂ ಈ ರೀತಿ ದಾಖಲಾತಿ ಅನುಮೋದನೆಯಾಗದೇ ತಿರಸ್ಕೃತಗೊಂಡ ಪ್ರಕರಣದಲ್ಲಿ ಸಂಸ್ಥೆಯವರು ಅವರ ಹಂತದಲ್ಲಿಯೇ ಸಂಬಂಧಿಸಿದ ವಿದ್ಯಾರ್ಥಿಗಳಿಗೆ ಹಿಂಬರಹ ನೀಡತಕ್ಕದ್ದು.

ಪರೀಕ್ಷಾ ಶುಲ್ಕವನ್ನು ಮಂಡಳಿಯಿಂದ ಕಳುಹಿಸಿರುವ NEFT ಚಲನ್ ಮುಖಾಂತರವೇ ಪಾವತಿಸಬೇಕು. ಬೇರೆ ಯಾವುದೇ ವಿಧದಲ್ಲಿ ಕಳುಹಿಸಿದರೂ ಅಂಗೀಕರಿಸುವುದಿಲ್ಲ. ಅಗತ್ಯ ಬಿದ್ದಲ್ಲಿ ಚಲನ್‌ನ ಜೆರಾಕ್ಸ್ ಪ್ರತಿಯನ್ನು ಬಳಸಬಹುದು.

## <u>ಪರೀಕ್ಷಾ ಶುಲ್ಕದ ವಿವರ</u>

| ರೆಗ್ಯುಲರ್ ಅಭ್ಯರ್ಥಿಗಳು | ಶುಲ್ಕ | ಪುನರಾವರ್ತಿತ ಅಭ್ಯರ್ಥಿಗಳು | ಶುಲ್ಕ |
|---|---|---|---|
| 1) ಪೂರ್ಣ ಪರೀಕ್ಷೆ (ಗ್ರೂಪ್ –ಎ ಮತ್ತು ಬಿ ಎರಡಕ್ಕೂ) | ರೂ.850.00 | *1.1.1.1 ಗ್ರೂಪ್–ಎ*<br>1) 1 ವಿಷಯಕ್ಕೆ<br>2) 2 ವಿಷಯಗಳಿಗೆ<br>3) 3 ಮತ್ತು ಹೆಚ್ಚಿನ ವಿಷಯಗಳಿಗೆ<br>4) **<u>ಗ್ರೂಪ್–ಬಿ</u>** ವಿಷಯಗಳಿಗೆ | <br>ರೂ.325.00<br>ರೂ.350.00<br>ರೂ.850.00<br>ರೂ.310.00 |
| 2) ಅರ್ಜಿ ಶುಲ್ಕ | ರೂ.20.00 | ಅರ್ಜಿ ಶುಲ್ಕ | ರೂ.20.00 |
| 3) ಫಲಿತಾಂಶ ಶುಲ್ಕ | ರೂ.30.00 | ಫಲಿತಾಂಶ ಶುಲ್ಕ | ರೂ.30.00 |
| ಒಟ್ಟು | ರೂ.900.00 | | |

ಪುನರಾವರ್ತಿತ ಅಭ್ಯರ್ಥಿಗಳಿಂದ ಮೇಲೆ ಸೂಚಿಸಿರುವ ಪ್ರಕಾರ ಪರೀಕ್ಷಾ ಶುಲ್ಕವನ್ನು ವಸೂಲಿ ಮಾಡುವುದು.ಅರ್ಜಿ ಶುಲ್ಕ ರೂ.20.00 ಮತ್ತು ಫಲಿತಾಂಶ ತಿಳಿಸುವ ಶುಲ್ಕ ರೂ.30.00ಗಳನ್ನುಪುನರಾವರ್ತಿತ ಅಭ್ಯರ್ಥಿಗಳಿಂದಲೂ ಕಡ್ಡಾಯವಾಗಿ ವಸೂಲಿ ಮಾಡಬೇಕು.ಪರೀಕ್ಷಾ ಶುಲ್ಕವನ್ನು ಪಾವತಿ ಮಾಡಲು ಈ ಕೆಳಕಂಡ ದಿನಾಂಕಗಳನ್ನು ನಿಗದಿಪಡಿಸಿದೆ.

| | |
|---|---|
| ಸಂಸ್ಥೆಯಲ್ಲಿ ಪರೀಕ್ಷಾರ್ಥಿಗಳಿಂದ ಪರೀಕ್ಷಾ ಶುಲ್ಕ ಸ್ವೀಕರಿಸಲು ಕೊನೆಯ ದಿನಾಂಕ | |
| ಬ್ಯಾಂಕ್ NEFT ಚಲನ್‌ಮೂಲಕ ಹಣ ಪಾವತಿಸಲು ಕೊನೆಯ ದಿನಾಂಕ | |

ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕವನ್ನು ಸಮಾಜ ಕಲ್ಯಾಣ ಇಲಾಖೆಯಿಂದ ಪ್ರಾಂಶುಪಾಲರು ಮರು ಪಾವತಿ ಪಡೆದುಕೊಳ್ಳತಕ್ಕದ್ದು.ನಿರ್ದೇಶಕರು, ಉರ್ದು ಮತ್ತು ಇತರೆ ಅಲ್ಪ ಸಂಖ್ಯಾತ ಭಾಷಾ ಶಾಲೆಗಳ

ನಿರ್ದೇಶನಾಲಯ ಇವರ ಸುತ್ತೋಲೆ ಸಂಖ್ಯೆ:ಹಿಂ.ಶಿ.ನಿಯಮ–03/01–02 ದಿನಾಂಕ: 13.06.2001ರಲ್ಲಿ ನಿಗದಿ ಪಡಿಸಿರುವಂತೆ ವಿದ್ಯಾರ್ಥಿಗಳ ಹಾಜರಾತಿ ಇರತಕ್ಕದ್ದು,

ಅನುತ್ತೀರ್ಣ ಅಭ್ಯರ್ಥಿಗಳು ಹಿಂದೆ ಪರೀಕ್ಷೆ ತೆಗೆದುಕೊಂಡಿರುವ ಅನುತ್ತೀರ್ಣ ಅಂಕಪಟ್ಟಿಯ ಮೂಲ ಪ್ರತಿ ಮತ್ತು ಒಂದು ಭಾವಚಿತ್ರವನ್ನು ಕಳುಹಿಸಬೇಕು.ಅಭ್ಯರ್ಥಿಯ ಹೆಸರು, ತಂದೆ ಹೆಸರು ಹಾಗೂ ತಾಯಿಯ ಹೆಸರು ಎಸ್.ಎಸ್.ಎಲ್.ಸಿ

ತೇರ್ಗಡೆ ಪತ್ರದಲ್ಲಿ ನಮೂದಿಸಿರುವ ಪ್ರಕಾರವೇ ನಮೂದಿಸಬೇಕು.ತಪ್ಪಿದ್ದಲ್ಲಿ ಸಂಬಂಧಿಸಿದ ಪ್ರಾಚಾರ್ಯರುಗಳೇ ಪೂರ್ಣ ಹೊಣೆಗಾರರಾಗಿದ್ದು, ಅಂತಹ ಅರ್ಜಿಗಳನ್ನು ಯಾವುದೇ ಮುನ್ಸೂಚನೆ ಇಲ್ಲದೇ ತಿರಸ್ಕರಿಸಲಾಗುವುದು.

ಎಲ್ಲಾ ಪುನರಾವರ್ತಿತ ವಿದ್ಯಾರ್ಥಿಗಳ ಮಾಹಿತಿಯನ್ನು ಸ್ಪಷ್ಟವಾಗಿ ಪ್ರತ್ಯೇಕ ನಾಮಪಟ್ಟಿಯಲ್ಲಿ ಭರ್ತಿ ಮಾಡಿ ಮೂಲ ಅನುತ್ತೀರ್ಣ ಅಂಕಪಟ್ಟಿಯನ್ನು ಅರ್ಜಿಗೆ ಲಗತ್ತಿಸಿ ಕಳುಹಿಸುವುದು.

ಮೇಲೆ ನಮೂದಿಸಿರುವ ಎಲ್ಲಾ ಅಂಶಗಳನ್ನು ಪರಿಶೀಲಿಸಿದ ನಂತರವೇ ಪ್ರಾಚಾರ್ಯರು ಅಭ್ಯರ್ಥಿಗಳ ಹೆಸರಿನ ಪಟ್ಟಿಗಳನ್ನು ದಿನಾಂಕ:----------ಅಥವಾ ಅದಕ್ಕೂ ಮುಂಚೆ ಈ ಕಛೇರಿಗೆ ತಲುಪುವಂತೆ ಕಳುಹಿಸಬೇಕು. ತಡವಾಗಿ ಬಂದ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ನಿಗದಿಪಡಿಸಿರುವ ವಿದ್ಯಾರ್ಥಿಗಳ ಸಂಖ್ಯೆಗಿಂತ ಹೆಚ್ಚಿನ ಅಭ್ಯರ್ಥಿಗಳ ಶುಲ್ಕಪಾವತಿಸಿ ಮಾಹಿತಿ ಸಲ್ಲಿಸಿದಲ್ಲಿ ಹೆಚ್ಚುವರಿ ಪಾವತಿಸಿದ ಹಣವನ್ನು ಮರು ಪಾವತಿ ಮಾಡಲಾಗುವುದಿಲ್ಲ ಹಾಗೂ ಈ ಬಗ್ಗೆ ಯಾವುದೇ ಪತ್ರ ವ್ಯವಹಾರವನ್ನು ಮಾಡಲಾಗುವುದಿಲ್ಲ.

ಹಿಂದಿ ಶಿಕ್ಷಕ್ ಪರೀಕ್ಷೆ ನಾಮಿನಲ್ ರೋಲ್, ಓ.ಎಂ.ಆರ್, ಅನುತ್ತೀರ್ಣ ಅಭ್ಯರ್ಥಿಗಳ ಅಂಕಪಟ್ಟಿ, ಇತರೆ ಮಾಹಿತಿ ಮತ್ತು ಮೂಲ ಬ್ಯಾಂಕ್ ಚಲನ್ ಒಳಗೊಂಡ ಲಕೋಟೆಯು ಪರೀಕ್ಷಾ ಮಂಡಳಿಯ ಬೇರೆ ಶಾಖೆಗೆ ಹೋಗದಂತೆ ಎಚ್ಚರಿಕೆ ವಹಿಸಲು ಲಕೋಟೆಯ ಮೇಲೆ **"ಹಿಂದಿ ಶಿಕ್ಷಕ್ ಪರೀಕ್ಷೆಯ ನಾಮಿನಲ್ ರೋಲ್"** ಎಂದು ನಮೂದಿಸಿ ಕೆಳಕಂಡ ವಿಳಾಸಕ್ಕೆ ಕಳುಹಿಸಲು ಸೂಚಿಸಿದೆ.

ಸಹಾಯಕ ನಿರ್ದೇಶಕರು,
ಹಿಂದಿ ಶಿಕ್ಷಕ್ ವಿಭಾಗ,
4ನೇ ಮಹಡಿಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ,
6ನೇ ಅಡ್ಡರಸ್ತೆ, ಮಲ್ಲೇಶ್ವರಂ,
ಬೆಂಗಳೂರು –560003.

**ಸೂಚನೆ :-**

1. ಪ್ರತಿ ಸಂಸ್ಥೆಯವರು 2015ನೇ ಸಾಲಿನ ಹಿಂದಿ ಶಿಕ್ಷಕ್ ಪರೀಕ್ಷೆಗೆ ಕುಳಿತುಕೊಳ್ಳಲಿರುವ ಅಭ್ಯರ್ಥಿಗಳ ಒಟ್ಟು ಸಂಖ್ಯೆಯ ಆಧಾರದ ಮೇಲೆ (ವಿಷಯವಾರು ಹೆಚ್‌ಡಿ–01ರಿಂದ ಹೆಚ್‌ಡಿ–10ರವರೆಗೆ) ಈ ಜ್ಞಾಪನದೊಂದಿಗೆ ಕಳುಹಿಸಿರುವ ಪ್ರಶ್ನೆ ಪತ್ರಿಕೆ ಬೇಡಿಕೆ ಪತ್ರದಲ್ಲಿ ತಪ್ಪಿಲ್ಲದಂತೆ ತುಂಬಿ ದೃಢೀಕರಿಸಿ ಕಳುಹಿಸಬೇಕು. (ಫ್ರೆಶರ್ಸ್ ಮತ್ತು ರಿಪೀಟರ್ಸ್ ಒಳಗೊಂಡಂತೆ ಈ ಮಾಹಿತಿ ಇರಬೇಕು) ಸದರಿ ಮಾಹಿತಿಯನ್ನು ಯಾವುದೇ ಕಾರಣಕ್ಕೂ ಬದಲಾವಣೆ ಮಾಡಲು ಅವಕಾಶವಿರುವುದಿಲ್ಲ.
2. ಈ ಹಿಂದಿನ ಸಾಲುಗಳ ಪರೀಕ್ಷೆಯ ಪರೀಕ್ಷಾ ಕೇಂದ್ರಗಳಲ್ಲಿ ಅವ್ಯವಹಾರದಲ್ಲಿ ತೊಡಗಿದ್ದ ಅಭ್ಯರ್ಥಿಗಳ ಉಚ್ಚಾಟನೆ ಮಾಡಲಾಗಿದ್ದವರುಗಳು ಪರೀಕ್ಷೆಗೆ ಕುಳಿತುಕೊಳ್ಳಲು ಬಯಸಿದಲ್ಲಿ ಸದರಿ ಅಭ್ಯರ್ಥಿಗಳ ವಿವರವನ್ನು ಉಚ್ಚಾಟಿಸಿದ ಜ್ಞಾಪನದಲ್ಲಿಯ ಸೂಚನೆಯಂತೆ ಪರೀಕ್ಷಾ ಮಂಡಳಿಯಿಂದ ಅನುಮತಿ ಪಡೆದ ನಂತರ ಪರೀಕ್ಷೆ ತೆಗೆದುಕೊಳ್ಳುವಂತೆ ವ್ಯವಸ್ಥೆ ಮಾಡಲು ತಿಳಿಸಿದೆ.

3. ಸಂಬಂಧಿತ ಕಾಲೇಜಿನ ಪರೀಕ್ಷಾರ್ಥಿಗಳ ಓ.ಎಂ.ಆರ್.ಗಳನ್ನು ಈ ಅಧಿಸೂಚನೆಯೊಂದಿಗೆ ಕಳುಹಿಸಲಾಗಿದೆ.

ಸಹಿ/–

ನಿರ್ದೇಶಕರು

(ಇತರೆ ಪರೀಕ್ಷೆಗಳು)

**ಇವರಿಗೆ.**

1. ಎಲ್ಲಾ ಅಂಗೀಕೃತ ಹಿಂದಿ ಶಿಕ್ಷಕ್ ವಿದ್ಯಾಲಯಗಳ ಪ್ರಾಚಾರ್ಯರುಗಳಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು ರವರಿಗೆ ಅವಗಾಹನೆಗಾಗಿ ಸಲ್ಲಿಸಿದೆ.
3. ನಿರ್ದೇಶಕರು, ಉರ್ದು ಮತ್ತು ಇತರೆ ಅಲ್ಪ ಸಂಖ್ಯಾತರ ಭಾಷಾ ನಿರ್ದೇಶನಾಲಯ, ಬೆಂಗಳೂರುರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
4. ಪ್ರಾಂಶುಪಾಲರು, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, (ಡಯಟ್) ------------------ ರವರಿಗೆ ಅಗತ್ಯ ಕ್ರಮಕ್ಕಾಗಿ
5. ಕಛೇರಿ ಪ್ರತಿ.

# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ

**6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560 003.**

ಸಂಖ್ಯೆ:ಡಬ್ಲ್ಯೂ2/ಹಿಂ.ಶಿ.ಪ/ಮೇ–2015/32/2014–15ದಿನಾಂಕ: 30.03.2015

**ಗೆ,**
ಪ್ರಾಂಶುಪಾಲರು,
ಹಿಂದಿಶಿಕ್ಷಕ್ ತರಬೇತಿ ಕಾಲೇಜು,
––––––––––––––––––––––
––––––––––––––––––––––

ಮಾನ್ಯರೆ,
**ವಿಷಯ**: ಮೇ 2015ರ ಹಿಂದಿಶಿಕ್ಷಕ್ ಪರೀಕ್ಷೆಯ ನಾಮಾಂಕಿತ ಪಟ್ಟಿಯ ಚೆಕ್‌ಲಿಸ್ಟ್ ಕಳುಹಿಸುವ ಬಗ್ಗೆ.

***

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಮೇ 2015ರ ಹಿಂದಿ ಶಿಕ್ಷಕ್ ಪರೀಕ್ಷೆಗೆ ಹಾಜರಾಗುವ ನಿಮ್ಮ ಕಾಲೇಜಿನ – ––––– ವಿದ್ಯಾರ್ಥಿಗಳ ನಾಮಪಟ್ಟಿಯ ಚೆಕ್‌ಲಿಸ್ಟನ್ನು (ನಾಮಿನಲ್ ರೋಲ್) ಓ.ಎಂ.ಆರ್.ನಲ್ಲಿ ನೀವು ನಮೂದಿಸಿರುವ ಮಾಹಿತಿಯ ಆಧಾರದ ಮೇಲೆ ಸಿದ್ಧಪಡಿಸಿ ಈ ಪತ್ರದೊಂದಿಗೆ ಅನುಬಂಧಿಸಿ ಕಳುಹಿಸಲಾಗಿದೆ. ನೀವು ಈ ಚೆಕ್‌ಲಿಸ್ಟ್‌ನಲ್ಲಿ ನಮೂದಿಸಿರುವ ಪ್ರತಿಯೊಂದು ಪದವನ್ನು ಕೂಲಂಕುಷವಾಗಿ ಪರಿಶೀಲಿಸಿ, ತಪ್ಪುಗಳೇನಾದರೂ ಕಂಡು ಬಂದಲ್ಲಿ ಅದನ್ನು ಕೆಂಪು ಶಾಯಿಯಲ್ಲಿ ಹೊಡೆದು ಹಾಕಿ ಅದರ ಮೇಲೆ ನಿಖರವಾದ ವಿವರವನ್ನು ಬರೆದು, ತಿದ್ದುಪಡಿ ಮಾಡಿದ ಪ್ರತಿಯೊಂದು ಪದವನ್ನು ದೃಢೀಕರಿಸಲು ತಿಳಿಸಿದೆ.ದೃಢೀಕೃತ ನಾಮಪಟ್ಟಿಯ ಚೆಕ್‌ಲಿಸ್ಟ್‌ನ್ನು ದಿನಾಂಕ:–––––––––––––––ರೊಳಗೆ ತಪ್ಪದೇ ಮಂಡಳಿಗೆ ಸಲ್ಲಿಸಲು ತಿಳಿಸಿದೆ. ನಂತರದಲ್ಲಿ ಯಾವುದೇ ತಿದ್ದುಪಡಿಗಳಿದ್ದಲ್ಲಿ ಮಂಡಳಿಯ ನಿಯಮಾನುಸಾರ ದಂಡ ಪಾವತಿಸಬೇಕಾಗುತ್ತದೆ.

ತಮ್ಮ ನಂಬುಗೆಯ,

ಸಹಿ/–
ನಿರ್ದೇಶಕರು
(ಇತರೆ ಪರೀಕ್ಷೆಗಳು)

## ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ ಬೆಂಗಳೂರು-3

ಸಂಖ್ಯೆ: ಡಬ್ಲ್ಯು2-ಹಿಂದಿ ಶಿಕ್ಷಕ್-ಮು.ಅ.-2013 ದಿನಾಂಕ 03-08-2013.

**{- ಸು ತ್ತೋ ಲೆ -}**

ವಿಷಯ :-ಹಿಂದಿ ಶಿಕ್ಷಕ್ ಪರೀಕ್ಷೆ ಆಗಸ್ಟ್2013- ಮುಖ್ಯ ಅಧೀಕ್ಷಕರಿಗೆ
ಹಾಗೂ ಉಪ ಮುಖ್ಯ ಅಧೀಕ್ಷಕರಿಗೆ ತಿಳುವಳಿಕೆ ಕುರಿತು

<><><><>

**1. ಅವ್ಯವಹಾರಗಳನ್ನು (ಮಾಲ್ ಪ್ರಾಕ್ಟೀಸ್) ತಪ್ಪಿಸುವಿಕೆ:-**

ಅ) ಪರೀಕ್ಷೆಯನ್ನು ಸಮರ್ಪಕವಾಗಿ ನಡೆಸುವ ಸಂದರ್ಭದಲ್ಲಿ ಪರೀಕ್ಷಾ ಕೊಠಡಿಗಳ ಮೇಲ್ವಿಚಾರಕರ ಜವಾಬ್ದಾರಿಗುರುತರವಾದದ್ದು. ಈ ಬಗ್ಗೆ ಯಾವುದೇ ಕರ್ತವ್ಯಲೋಪವಿದ್ದಲ್ಲಿ ಅದನ್ನು ತೀವ್ರವಾಗಿ ಗಮನಿಸಲಾಗುವುದು.

ಆ) ಅಭ್ಯರ್ಥಿಗಳನ್ನು ಪರೀಕ್ಷಾ ಕೊಠಡಿಗೆ ಬಿಡುವ ಮುನ್ನ ಅವರಲ್ಲಿರಬಹುದಾದ ಎಲ್ಲಾ ವಸ್ತುಗಳನ್ನು ಶೋಧನೆ ಮಾಡಿ, ನಕಲು ಮಾಡುವುದು ಇತ್ಯಾದಿ ಅವ್ಯವಹಾರಗಳನ್ನು ತಪ್ಪಿಸಲು ಅವರು ತಮ್ಮ ಜೊತೆಗೆ ಪುಸ್ತಕಗಳು, ಬರವಣಿಗೆಯುಳ್ಳ ಚೀಟಿ ವಗೈರೆಗಳನ್ನು ಹೊಂದಿರದಂತೆ ನೋಡಿಕೊಳ್ಳಬೇಕೆಂದು ಕೊಠಡಿಯ ಮೇಲ್ವಿಚಾರಕರಿಗೆ ತಿಳುವಳಿಕೆ ನೀಡಬೇಕು. ಶಾಲಾ ವಿದ್ಯಾರ್ಥಿಗಳಿಗೂ ಮತ್ತು ಪುನರಾವರ್ತಿತ (ರಿಪೀಟರ್ಸ್) ವಿದ್ಯಾರ್ಥಿಗಳಿಗೂ ಭಾವಚಿತ್ರ ಅಳವಡಿಸಿರುವುದರಿಂದ ಅವರ ಪಾಸ್‌ಪೋರ್ಟ್ ಸೈಜಿನ ಪೋಟೋವನ್ನು ಪರಿಶೀಲಿಸಿ ವಿದ್ಯಾರ್ಥಿಯನ್ನು ಖಾತರಿ ಮಾಡಿಕೊಳ್ಳತಕ್ಕದ್ದು. ಪರೀಕ್ಷೆ ಬರೆಯುವ ಮೊದಲೇ ವಿದ್ಯಾರ್ಥಿಯ ಗುರುತು ಖಚಿತಪಡಿಸಿಕೊಳ್ಳುವುದು.ಬದಲಾವಣೆಗಳು ಇದ್ದಲ್ಲಿ ತಕ್ಷಣ ಮಂಡಳಿಗೆ ವರದಿ ಮಾಡುವುದು.

ಇ)ಉತ್ತರ ಪತ್ರಿಕೆಯಲ್ಲಿ ಬರೆದಿರುವ ನೋಂದಣಿ ಸಂಖ್ಯೆಯೂ ಅಭ್ಯರ್ಥಿಗಳ ಪ್ರವೇಶ ಪತ್ರದಲ್ಲಿರುವ ಇರುವ ನೋಂದಣಿ ಸಂಖ್ಯೆಯೂ ಒಂದೇ ಆಗಿರುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದೆಂದು ಮೇಲ್ವಿಚಾರಕರಿಗೆ ತಿಳಿಸಬೇಕು. ಅಭ್ಯರ್ಥಿಗಳು ನೊಂದಣಿ ಸಂಖ್ಯೆಯನ್ನು ಅಳಿಸುವುದು ಅಥವಾ ಅದರ ಮೇಲೆ ತಿದ್ದುವುದು ಇವುಗಳಿಗೆ ಅವಕಾಶ ಕೊಡಬಾರದು.ಉತ್ತರ ಪತ್ರಿಕೆಗಳ ಮೇಲೆ ನೊಂದಣಿ ಸಂಖ್ಯೆಯ ಮಾಡಿರತಕ್ಕ ತಿದ್ದುಪಡಿಗೆ ಮುಖ್ಯ ಅಧೀಕ್ಷಕರು ತಮ್ಮ ಪೂರ್ಣ ರುಜುವಿನೊಡನೆ ಅಂಕಿತ ಹಾಕಬೇಕು.

ಈ) ಮೌಲ್ಯಮಾಪನದಲ್ಲಿ ಅವ್ಯವಹಾರವನ್ನು ತಡೆಗಟ್ಟುವ ಉದ್ದೇಶದಿಂದ ಕೋಡಿಂಗ್ ಪದ್ಧತಿಯನ್ನು ಜಾರಿಗೆ ತರಲಾಗಿದೆ. ಆದ್ದರಿಂದ ವಿದ್ಯಾರ್ಥಿಗಳು ನೋಂದಣಿ ಸಂಖ್ಯೆಗಳನ್ನು ಉತ್ತರ ಪತ್ರಿಕೆಯಲ್ಲಿ ನಿರ್ದಿಷ್ಟವಾಗಿ ಸೂಚಿಸಿರುವ ಜಾಗದಲ್ಲಿ ಬರೆಯುವಂತೆ ಮುಖ್ಯ ಅಧೀಕ್ಷಕರು ಕೊಠಡಿ ಮೇಲ್ವಿಚಾರಕರಿಗೆ ಸೂಚಿಸಬೇಕಾಗಿ ತಿಳಿಸಲಾಗಿದೆ.**ನಿಯಮದಂತೆ ನೋಂದಣಿ ಸಂಖ್ಯೆ ಬರೆಯದೆ ಉತ್ತರ ಪತ್ರಿಕೆ ಒಳಪುಟಗಳಲ್ಲಿ ಬರೆಯುವುದು ಮತ್ತು ಯಾವುದೇ ತರಹ ಚಿಹ್ನೆ (ಗುರುತು) ಬರೆದಿರುವುದು ಕಂಡುಬಂದರೆ ಅಂತಹ ವಿದ್ಯಾರ್ಥಿಗಳನ್ನು ಅವ್ಯವಹಾರಕ್ಕೆ ಒಳಪಟ್ಟವರು ಎಂದು ಪರಿಗಣಿಸಲಾಗುವುದು ಎಂಬ ವಿಷಯದ ಬಗ್ಗೆ ತಿಳುವಳಿಕೆ ನೀಡತಕ್ಕದ್ದು.**

ಉ) ಪರೀಕ್ಷಾ ಕೊಠಡಿಯಲ್ಲಿ ಯಾವುದೇ ಅವ್ಯವಹಾರಗಳು ನಡೆಯದಂತೆ ನೋಡಿಕೊಳ್ಳುವುದು ಮೇಲ್ವಿಚಾರಕರ/ಸಿಬ್ಬಂದಿಯವರ ಜವಾಬ್ದಾರಿಯಾಗಿರುತ್ತದೆ. ಅವರುಗಳು ಗಮನಿಸಿದ ಮೇಲೂ ಅವರ ಕಣ್ಣು ತಪ್ಪಿಸಿ ಅಂತಹ ಅವ್ಯವಹಾರಗಳು ನಡೆಯುತ್ತಿದ್ದಲ್ಲಿ,

ಮುಖ್ಯ ಅಧೀಕ್ಷಕರಿಗೆ ಕೂಡಲೇ ತಿಳಿಸಬೇಕು. ಅಂತಹ ಅವ್ಯವಹಾರಗಳನ್ನು ಪ್ರೋತ್ಸಾಹಿಸುವ ಕೊಠಡಿ ಮೇಲ್ವಿಚಾರಕರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳಲಾಗುವುದು

ಊ) **ಸದರಿ ಪರೀಕ್ಷೆಗೆ ಹಿಂದಿ ಶಿಕ್ಷಕರನ್ನಾಗಲೀ, ಅಥವಾ ಹಿಂದಿ ಭಾಷೆ ತಿಳಿದಿರುವ ಬೇರೆ ಸಹ ಶಿಕ್ಷಕರನ್ನಾಗಲೀ ಯಾವುದೇ ಕಾರಣಕ್ಕೂ ಕೊಠಡಿ ಮೇಲ್ವಿಚಾರಕರನ್ನಾಗಿ ನೇಮಕ ಮಾಡಬಾರದು** ಕೇಂದ್ರದಲ್ಲಿ ಪತ್ತೆ ಹಚ್ಚಲ್ಪಟ್ಟ ಅವ್ಯವಹಾರಗಳ ಬಗ್ಗೆ ತಕ್ಷಣ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ನಿರ್ದೇಶಕರಾದ (ಇತರೆ ಪರೀಕ್ಷೆಗಳು) ಶ್ರೀ ರಾಮರಾವ್ ಅವರಿಗೆ ಈ ಕೆಳಕಂಡ ವಿವರಗಳನ್ನು ಹೊಂದಿದ ವರದಿಯನ್ನು ಕಳುಹಿಸತಕ್ಕದ್ದು.

1. ಅಭ್ಯರ್ಥಿಯ ಹೆಸರು ಮತ್ತು ನೊಂದಣಿ ಸಂಖ್ಯೆ ಹಾಗೂ ಅವರ ವಿಳಾಸ
2. ತಂದೆಯ ಹೆಸರು
3. ಯಾವ ಶಾಲೆಯ ಮೂಲಕ ಪರೀಕ್ಷೆಗೆ ಕುಳಿತಿರುವುದು
4. ಕೇಂದ್ರದ ಹೆಸರು
5. ಅವ್ಯವಹಾರ ಪತ್ತೆ ಹಚ್ಚಿದ ಅಧಿಕಾರಿಯ ಹೆಸರು ಮತ್ತು ವಿಳಾಸ
6. ಕೊಠಡಿಯ ಮೇಲ್ವಿಚಾರಕರ ಹೆಸರು
7. ಮುಖ್ಯ ಅಧೀಕ್ಷಕರ ಸ್ಪಷ್ಟ ಅಭಿಪ್ರಾಯಗಳನ್ನು ಹೊಂದಿರುವ ಹೇಳಿಕೆ ಅಲ್ಲದೆ ಮೇಲಿನ ವರದಿಯೊಂದಿಗೆ ಈ ಕೆಳಗಿನ ದಸ್ತಾವೇಜುಗಳನ್ನು ತಪ್ಪದೇ ಲಗತ್ತಿಸಿರಬೇಕು

(1) ಕೊಠಡಿಯ ಮೇಲ್ವಿಚಾರಕರ ಹೇಳಿಕೆ

(2) ಅಭ್ಯರ್ಥಿಯ ಹೇಳಿಕೆ

(3) ಅಭ್ಯರ್ಥಿಯು ಉಪಯೋಗಿಸುತ್ತಿದ್ದ ಉತ್ತರ ಪತ್ರಿಕೆ, ಅವನ/ಅವಳ ಪ್ರವೇಶ ಪತ್ರ, ಪ್ರಶ್ನೆ ನಕಲು ಮಾಡಲು ಉಪಯೋಗಿಸುತ್ತಿದ್ದ/ಕೈಯಲ್ಲಿ ಬರೆದ ಅಥವಾ ಮುದ್ರಿತ ಚೀಟಿಗಳು ಪುಸ್ತಕ (ಇವುಗಳಿಗೆ ಮುಖ್ಯ ಅಧೀಕ್ಷಕರಿಂದ ಅಂಕಿತ ಹಾಕಿಸಲ್ಪಟ್ಟಿರಬೇಕು) ಇವುಗಳೆಲ್ಲವನ್ನೂ ವರದಿಗೆ ಸೇರಿಸಿ ದಾರದಿಂದ ಹೊಲಿದಿರತಕ್ಕದ್ದು.

ವರದಿಯನ್ನು ಕಳುಹಿಸುವ ಮುನ್ನ ಅಭ್ಯರ್ಥಿಯ ಬಳಿಯಲ್ಲಿದ್ದ ಚೀಟಿಗಳು ಅಂದಿನ ವಿಷಯ ಮತ್ತು ಆ ಹೊತ್ತಿಗೆ ಸಂಬಂಧಪಟ್ಟಿವೇ ಎಂದೂ, ಅಭ್ಯರ್ಥಿಯು ಅವುಗಳಿಂದ ನಕಲು ಮಾಡಿರುತ್ತಾನೆ ಎಂಬುದನ್ನು ಪರೀಕ್ಷಿಸಿ ವರದಿಯ 7ನೇ ಕಾಲಂನ ಮುಖ್ಯ ಅಧೀಕ್ಷಕರ ಹೇಳಿಕೆಯಲ್ಲಿ ಸೇರಿಸಬೇಕು.ಅಭ್ಯರ್ಥಿಯು ನಕಲು ಮಾಡಿದ ಅವ್ಯವಹಾರಗಳು ನಡೆಸಿದ ಹೊತ್ತಿನ ಪರೀಕ್ಷೆಯಿಂದಲೇ ಅಭ್ಯರ್ಥಿಯನ್ನು ಹೊರದೂಡತಕ್ಕದ್ದು.ಅಭ್ಯರ್ಥಿಯು ಹೊಂದಿದ್ದ ಚೀಟಿಗಳು ಅಂದಿನ ವಿಷಯದ ಅಥವಾ ಆ ಹೊತ್ತಿಗೆ ಸಂಬಂಧಿಸಿಲ್ಲವಾದಲ್ಲಿ ಅಭ್ಯರ್ಥಿಗೆ ಒಂದು ತೀವ್ರ ಎಚ್ಚರಿಕೆ ನೀಡಿ ಪರೀಕ್ಷೆ ಬರೆಯಲು ಅನುಮತಿ ನೀಡಬೇಕು.

**2 ಪ್ರಶ್ನೆ ಪತ್ರಿಕೆಯ ಲಕೋಟೆಗಳನ್ನು ತೆರೆಯುವುದರ ಬಗ್ಗೆ:-**

ಅ) ಪರೀಕ್ಷೆಯು ಪ್ರಾರಂಭವಾಗುವ ಸಮಯಕ್ಕೆ 1 ಘಂಟೆ ಮುಂಚಿತವಾಗಿ ಖಜಾನೆ / ಆರಕ್ಷಕ ಠಾಣೆಯಿಂದ ಆ ಹೊತ್ತಿಗೆ ಸಂಬಂಧಪಟ್ಟ ಪ್ರಶ್ನೆ ಪತ್ರಿಕೆಯ ಲಕೋಟೆಗಳನ್ನು ತೆಗೆದುಕೊಂಡು ವೇಳಾಪಟ್ಟಿ ನೋಡಿ ನೀವು ತೆಗೆದುಕೊಂಡಿರುವ ಪ್ರಶ್ನೆ ಪತ್ರಿಕೆಯ ಲಕೋಟೆಯು ಆ ದಿನಕ್ಕೆ ಮತ್ತು ಆ ವಿಷಯಕ್ಕೆ ಸಂಬಂಧಪಟ್ಟದ್ದೆಂದು ಖಚಿತಪಡಿಸಿಕೊಳ್ಳತಕ್ಕದ್ದು.

ಆ) ಪ್ರಶ್ನೆ ಪತ್ರಿಕೆ ಲಕೋಟೆಯ ಮೇಲಿನ ಮೊಹರುಗಳು ಸರಿಯಾಗಿದೆ ಎಂಬುದನ್ನು ಮತ್ತು

ಆ ವಿಷಯಕ್ಕೆ ಸಂಬಂಧಪಟ್ಟ ಪ್ರಶ್ನೆ ಪತ್ರಿಕೆಯ ಲಕೋಟೆಗಳನ್ನು ಮಾತ್ರ ತೆರೆಯಲ್ಪಟ್ಟಿರುವ ಬಗ್ಗೆ ಇಬ್ಬರು ಕೊಠಡಿಯ ಮೇಲ್ವಿಚಾರಕರಿಂದ ಪರೀಕ್ಷಿಸಿಕೊಂಡು ಆ ಕುರಿತು ಅವರಿಂದ ಲಕೋಟೆಯ ಮೇಲೆ ಗೊತ್ತು ಮಾಡಿರುವ ಜಾಗದಲ್ಲಿ ಮೊಹರುಗಳು ಸರಿಯಾಗಿದೆ ಎಂದು ಬರೆಸಿ ಅವರುಗಳಿಂದ ದಿನಾಂಕ ಮತ್ತು ವೇಳೆ ನಮೂದಿಸಿ ಪಡೆಯಬೇಕು.

ಇ) ಪ್ರಶ್ನೆ ಪತ್ರಿಕೆಯ ಲಕೋಟೆಗಳನ್ನು ಒಡೆದ ನಂತರ ಉಳಿದವುಗಳನ್ನು ಸುರಕ್ಷಿತವಾಗಿ ಕೇಂದ್ರದಲ್ಲಿ ಇಡಬೇಕು. ಅಭ್ಯರ್ಥಿಗಳಿಗೆ ಪ್ರಶ್ನೆ ಪತ್ರಿಕೆಗಳನ್ನು ಹಂಚಲು ಕಳುಹಿಸುವ ಮೊದಲೇ ವಿಷಯದ ಸಂಕೇತ ಸಂಖ್ಯೆ (ಕೋಡ್ ನಂಬರ್) ಮತ್ತು ದಿನಾಂಕ ಮುಂತಾದವುಗಳನ್ನು ವೇಳಾಪಟ್ಟಿಗೆ ಅನುಗುಣವಾಗಿರುವ ಬಗ್ಗೆ ದೃಢಪಡಿಸಿಕೊಳ್ಳಬೇಕು.ಲಕೋಟೆ ಒಳಗಿನ ಪ್ರಶ್ನೆ ಪತ್ರಿಕೆಗಳನ್ನು ಸಹ ಪರೀಕ್ಷಿಸಿ ಅವು ಆ ಹೊತ್ತಿಗೆ ಸಂಬಂಧಪಟ್ಟವೇ ಆಗಿವೆ ಎಂಬುದನ್ನು ದೃಢಪಡಿಸಿಕೊಳ್ಳಬೇಕು.

ಯಾವುದೇ ಅಭ್ಯರ್ಥಿಯು ತನ್ನ ಉತ್ತರ ಪತ್ರಿಕೆಯನ್ನು ಕಾಲಾವಧಿ ಮುಗಿದ ಕೂಡಲೇ ಕೊಠಡಿಯ ಮೇಲ್ವಿಚಾರಕರಿಗೆ ಕೊಡದೇ ಹೊರಟುಹೋಗುವುದು ಅಥವಾ ಪರೀಕ್ಷಾ ಕೊಠಡಿಯಲ್ಲಿ ಯಾವುದೇ ರೀತಿಯ ಅಶಿಸ್ತನ್ನು ತೋರಿದಲ್ಲಿ, ಅಂತಹವರನ್ನು ಮುಂದಿನ ನಾಲ್ಕು ಪರೀಕ್ಷೆಗೆ ದಾಖಲಾಗಲು ಅನರ್ಹರೆಂದು ಘೋಷಿಸಲಾಗುವುದು. (ಡಿಬಾರ್) ಎಂದು ಮುಖ್ಯ ಅಧೀಕ್ಷಕರು ಕೇಂದ್ರಗಳಲ್ಲಿ ನೋಟೀಸ್ ಬೋರ್ಡಿನ ಮೇಲೆ ಬರೆದು ಹೀಗೆ ತಪ್ಪು ಮಾಡಿದ ಅಭ್ಯರ್ಥಿಗಳನ್ನು ಮುಂದಿನ ಯಾವುದೇ ಹೊತ್ತಿನ ಪರೀಕ್ಷೆಗೆ ಕೂಡಲು ಬಿಡಬಾರದು.ಮತ್ತು ಈ ಬಗ್ಗೆ ಮಂಡಳಿ ನಿರ್ದೇಶಕರ ವೈಯಕ್ತಿಕ ವಿಳಾಸಕ್ಕೆ ವರದಿ ಮಾಡತಕ್ಕದ್ದು.

ಯಾವುದೇ ಹೊತ್ತಿನ ಪರೀಕ್ಷೆ ಮುಗಿದ ಕೂಡಲೇ ಅಭ್ಯರ್ಥಿಗಳಿಂದ ಅವರು ಪರೀಕ್ಷಾ ಕೊಠಡಿಯನ್ನು ಬಿಡುವ ಮುನ್ನ ಅವರ ಉತ್ತರ ಪುಸ್ತಕಗಳನ್ನು ಪಡೆದುಕೊಳ್ಳುವ ಜವಾಬ್ದಾರಿ ಕೊಠಡಿ ಮೇಲ್ವಿಚಾರಕರು ಮತ್ತು ಮುಖ್ಯ ಅಧೀಕ್ಷಕರಿಗೆ ಸೇರಿದ್ದಾಗಿರುತ್ತದೆ.

**3) ಅಭ್ಯರ್ಥಿಗಳನ್ನು ಗುರುತಿಸುವುದು:-**

ಪರೀಕ್ಷೆ ತೆಗೆದುಕೊಂಡಿರುವ ಶಾಲಾ ವಿದ್ಯಾರ್ಥಿಗಳನ್ನು (ರೆಗ್ಯುಲರ್ / ಫ್ರೆಷ್ ಕ್ಯಾಂಡಿಡೇಟ್ಸ್) ಅವರವರ ಶಾಲೆಯ ಯಾವುದೇ ಒಬ್ಬ ಉಪಾಧ್ಯಾಯರಿಂದ ಗುರುತಿಸಬೇಕು. ನಕಲು ಅಭ್ಯರ್ಥಿಗೆಪರೀಕ್ಷೆ ಬರೆಯಲು (ಇಂಪರ್ಸೋನೇಷನ್) ಅವಕಾಶ ಕೊಡದೆ ಇರಲು ಪ್ರತಿ ಅಭ್ಯರ್ಥಿಯ ಉತ್ತರ ಪುಸ್ತಕ ಪಡೆಯಲು ಕೊಡುವ ದಾಖಲೆಯಲ್ಲಿನ ರುಜು ಹಾಗೂ ಅವರು ಪ್ರವೇಶ ಪತ್ರದಲ್ಲಿ ಮಾಡಿರುವ ರುಜು ಸಾಮ್ಯ ಹೊಂದುತ್ತದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವಂತೆ ಕೊಠಡಿಯ ಮೇಲ್ವಿಚಾರಕರಿಗೆ ತಿಳುವಳಿಕೆ ನೀಡಿರಿ. ಇವೆರಡು ಸಹಿಗಳಲ್ಲಿ ವ್ಯತ್ಯಾಸ ಕಂಡುಬಂದ ಸಂದರ್ಭದಲ್ಲಿ ಈ ಬಗ್ಗೆ ವ್ಯತ್ಯಾಸವನ್ನು ವರದಿ ಮಾಡುವುದಲ್ಲದೆ ಅಂತಹ ಅಭ್ಯರ್ಥಿಯು ತನ್ನ ಗುರುತನ್ನು ನಿಮ್ಮ ಸಮಾಧಾನಕ್ಕೆ ಬರುವಂತೆ

ಪರಿಚಯಿಸಿಕೊಡಬೇಕೆಂದು ಕೇಳಿರಿ.ಅಭ್ಯರ್ಥಿಯು ಉತ್ತರ ಪತ್ರಿಕೆ ಹಿಂದಿರುಗಿಸುವಾಗಲೂ ನಿಗಧಿತ ನಮೂನೆಯಲ್ಲಿ (ಅಂದರೆ ಖಾಲಿ) ಉತ್ತರ ಪತ್ರಿಕೆ ನೀಡುವಾಗ ಸಹಿ ತೆಗೆದುಕೊಂಡ ನಮೂನೆಯಲ್ಲಿ ಮತ್ತೆ ಸಹಿ ಪಡೆಯಬೇಕು.

**3. <u>ಉತ್ತರ ಪತ್ರಿಕೆಗಳ ರವಾನೆ:-</u>**

ಪ್ರತಿ ಗೋಪ್ಯ ಲಕೋಟೆಯಲ್ಲಿ (ಕಾನ್ಫಿಡೆನ್ಸಿಯಲ್ ಕವರ್) 14 ಉತ್ತರ ಪತ್ರಿಕೆಗಳನ್ನು ನೊಂದಣಿ ಸಂಖ್ಯೆಗಳ ಕ್ರಮದಲ್ಲಿ ಹಾಕಿರಿ.ಉತ್ತರ ಪುಸ್ತಕಗಳಲ್ಲಿರುವ ನೊಂದಣಿ ಸಂಖ್ಯೆಗಳನ್ನು ಲಕೋಟೆಯ ಮೇಲಿರುವ ಪಟ್ಟಿಯಲ್ಲಿ ಬರೆದು ಇವೆರಡೂ ಕ್ರಮಬದ್ಧವಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳಿ. ಈ ಉತ್ತರ ಪತ್ರಿಕೆಗಳನ್ನೊಳಗೊಂಡ ಲಕೋಟೆಗಳನ್ನು ಬಟ್ಟೆಯಿಂದ ಮಾಡಿದ ಒಂದೇ ಚೀಲದಲ್ಲಿಟ್ಟು ಮೊಹರು ಮಾಡಬೇಕು. ಅದರಲ್ಲಿ ಪತ್ರಿಕೆಗಳ ಜ್ಞಾಪನ ಪತ್ರ (ಮೆಮೊ ಆಫ್ ಕಂಟೆಂಟ್ಸ್) ವನ್ನು ಇಡಬೇಕು.ಉತ್ತರ ಪುಸ್ತಕಗಳ ಗಂಟನ್ನು 100-00ರೂಗಳ ಮೌಲ್ಯಕ್ಕೆ ರಿಜಿಸ್ಟರ್ಡ್ ಇನ್ಸೂರ್ಡ್ ಪಾರ್ಸಲ್ ಮೂಲಕ (ಸ್ಥಳೀಯವಾಗಿದ್ದಲ್ಲಿ ಮುದ್ದಾಂ ಮೂಲಕ) ಯಾವುದೇ ಕಟ್ಟಿನ ತೂಕ 05 ಕೆ.ಜಿ.ಗಳಿಗಿಂತ ಹೆಚ್ಚಾಗುವ ಸಂದರ್ಭಗಳಲ್ಲಿ ಅದನ್ನು ಎರಡು ಕಟ್ಟುಗಳಾಗಿ ಮಾಡಿರಿ.ಯಾವುದೇ ಕಟ್ಟಿನ ತೂಕ 05 ಕೆ.ಜಿ.ಗಳಿಗಿಂತ ಹೆಚ್ಚಿಗೆ ಮೀರಬಾರದು.

ಕಟ್ಟುಗಳನ್ನು ನಿಮ್ಮ ಸಮ್ಮುಖದಲ್ಲಿ ಮೊಹರು ಮಾಡಿರಿ.ಪ್ರತಿ ಗಂಟಿನ ಮೇಲ್ಭಾಗದ ಬಟ್ಟೆಯ ಮೇಲೆ ಎಡ ಪಾರ್ಶ್ವದಲ್ಲಿ ಸ್ಪಷ್ಟವಾಗಿ ಕಾಣುವಂತೆ ಕೆಳಕಂಡ ವಿವರಗಳನ್ನು ಬರೆಯಬೇಕು.

1. ಪರೀಕ್ಷಾ ಕೇಂದ್ರದ ಸಂಖ್ಯೆ
2. ಕೇಂದ್ರದ ಹೆಸರು
3. ಲಕೋಟೆಗಳ ಸಂಖ್ಯೆ
4. ವಿಷಯ ಮತ್ತು ವಿಷಯದ ಸಂಕೇತಾಕ್ಷರ (ನೇಮ್ ಆಫ್ ದಿ ಸಬ್ಜೆಕ್ಟ್ ಅಂಡ್ ಕೋಡ್)
   (ಅ) ಅಭ್ಯರ್ಥಿಗಳು (ಫ್ರೆಷರ್ಸ್)
   (ಆ) ಅಭ್ಯರ್ಥಿಗಳು (ರಿಪೀಟರ್ಸ್)

ಉತ್ತರ ಪತ್ರಿಕೆಗಳ ರವಾನೆಯ ಜವಾಬ್ದಾರಿಯು ಮುಖ್ಯ ಅಧೀಕ್ಷಕರದ್ದಾಗಿರುತ್ತದೆ.ಮೌಲ್ಯಮಾಪನ ಕೇಂದ್ರದ ಅಭಿರಕ್ಷಕರ ಸರಿಯಾದ ವಿಳಾಸಕ್ಕೆ ಅನಾವಶ್ಯಕವಾಗಿ ತಡಮಾಡದೇ ಅವುಗಳನ್ನು ಕಳುಹಿಸಬೇಕು.

**5. <u>ಮುದ್ರಿತ ಹೆಸರು ಪಟ್ಟಿಯಲ್ಲಿ ಹಾಜರಾತಿ ಗುರುತಿಸುವ ಬಗ್ಗೆ:-</u>**

ಪರೀಕ್ಷಾ ಕೇಂದ್ರಕ್ಕೆ ಹೆಸರು ಪಟ್ಟಿಯ ಒಂದೇ ನಕಲನ್ನು ಒದಗಿಸಲಾಗುವುದು.ಆ ಪಟ್ಟಿಯಲ್ಲಿ ಪರೀಕ್ಷೆಗೆ ಗೈರು ಹಾಜರಾದವರನ್ನು ಅವರ ಹೆಸರಿನ ಎದುರಿಗೆ ಈ ಕೆಳಗೆ ತಿಳಿಸಿರುವಂತೆ ಗುರುತಿಸಿಕೊಂಡು ಹೆಸರು ಪಟ್ಟನ್ನು ಕೇಂದ್ರದಲ್ಲಿಯೇ ಇಟ್ಟುಕೊಳ್ಳಬೇಕು. ಗೈರು ಹಾಜರಿ ಗುರುತು ಹೊಂದಿರುವ ಆ ಹೆಸರು ಪಟ್ಟಿಯನ್ನು ತಯಾರು ಮಾಡಿ ಪರೀಕ್ಷೆಯು ಸಂಪೂರ್ಣ ಮುಗಿದ ಕೂಡಲೇ ಸಮಗ್ರ ಗೈರು ಹಾಜರು ಪಟ್ಟಿಯನ್ನು (ಕನ್ಸಾಲಿಡೇಟೆಡ್ ಆಬ್ಸೆಂಟ್ ಸ್ಟೇಟ್‌ಮೆಂಟ್) ತಯಾರಿಸಿ ಪ್ರತಿದಿನ ಮತ್ತು ಪ್ರತಿ ಪತ್ರಿಕೆವಾರು ಗೈರು ಹಾಜರಿ ಮತ್ತು ಸಮಗ್ರ ಗೈರು ಹಾಜರಿ ಪಟ್ಟಿ ಇವೆರಡನ್ನೂ ಪರೀಕ್ಷೆ ಮುಗಿದ ಕೂಡಲೇ ವಿಳಂಬ ಮಾಡದೆ **<u>" ಶ್ರೀಮತಿ ಹೇಮಲತಾ ಡಿ ನಾಯಕ್, ಸಹಾಯಕ ನಿರ್ದೇಶಕರು (ಇತರೆ ಪರೀಕ್ಷೆಗಳು)</u>**

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–3 ಇವರ ವಿಳಾಸಕ್ಕೆ ಕಳುಹಿಸತಕ್ಕದ್ದು. ಮುದ್ರಿತ ಹೆಸರಿನ ಪಟ್ಟಿಯಲ್ಲಿ ಗೈರು ಹಾಜರಿಯನ್ನು ಈ ಕೆಳಗೆ ತಿಳಿಸಿರುವಂತೆ ಹೆಸರಿನ ಪಟ್ಟಿಯಲ್ಲಿ ಗುರುತಿಸಿಕೊಳ್ಳಬೇಕು. ಎಲ್ಲಾ ವಿಷಯಗಳಲ್ಲೂ ಒಬ್ಬ ಅಭ್ಯರ್ಥಿಯು ಗೈರು ಹಾಜರಾಗಿದ್ದರೆ, ಅಭ್ಯರ್ಥಿಯ ನೋಂದಣಿ ಸಂಖ್ಯೆ ಎದುರಿಗೆ ಇರುವ ಎಲ್ಲಾ ಸೂಚ್ಯಾಂಕಗಳನ್ನು ಕೆಂಪು ಶಾಹಿಯಲ್ಲಿ ಪ್ರತಿಯೊಂದನ್ನು ಸುತ್ತುಗಟ್ಟಿ ಗುರುತಿಸಿ.

ಅಭ್ಯರ್ಥಿಗಳ ಪ್ರತಿನಿತ್ಯ ಗೈರುಹಾಜರಿ ಪಟ್ಟಿಯಲ್ಲಿ ನಮೂದಿಸಿರತಕ್ಕ ನೋಂದಣಿ ಸಂಖ್ಯೆಯನ್ನು ಹೆಸರು ಪಟ್ಟಿಯಲ್ಲಿ ಗುರುತಿಸಿರುವ ಗೈರುಹಾಜರಿಯನ್ನು ಪರೀಕ್ಷಿಸಿ ಎರಡೂ ವ್ಯತ್ಯಾಸವಿಲ್ಲದೇ ಇರುವುದನ್ನು ಸ್ಪಷ್ಟಪಡಿಸಿಕೊಳ್ಳಿ. ಪರೀಕ್ಷಾ ಕೇಂದ್ರದ ಅಧೀಕ್ಷಕರು ಹಾಗೂ ಕೊಠಡಿ ಮೇಲ್ವಿಚಾರಕರು ಪರೀಕ್ಷಾರ್ಥಿಗಳನ್ನು ಗುರುತಿಸಲು ಪ್ರವೇಶ ಪತ್ರದ (ಎ.ಟಿ.) ಮತ್ತೊಂದು ಪ್ರತಿಯನ್ನು ಕಳುಹಿಸುತ್ತಿರುವುದರಿಂದ ಸದರಿ ಪ್ರವೇಶ ಪತ್ರವನ್ನು ಪರಿಶೀಲಿಸಿ ವಿದ್ಯಾರ್ಥಿಗಳನ್ನು ಗುರುತಿಸುವುದು, ಸಹಿ ಪಡೆಯುವುದು ಹಾಗೂ ಇದನ್ನು ಪರೀಕ್ಷೆ ಮುಗಿದ ನಂತರ ಮಂಡಳಿಗೆ ಕಳುಹಿಸುವುದು. ಇದರೊಂದಿಗೆ ಕೆಲವು ಪ್ರವೇಶ ಪತ್ರಗಳಲ್ಲಿ ವಿದ್ಯಾರ್ಥಿಯ ಸಹಿ ಇರುವುದಿಲ್ಲ. ಸಂಬಂಧಿಸಿದ ವಿದ್ಯಾರ್ಥಿಯ ಭಾವಚಿತ್ರದೊಂದಿಗೆ ವಿದ್ಯಾರ್ಥಿಯನ್ನು ತಾಳೆ ನೋಡಿ ಅವರ ಸಹಿಯನ್ನು ತಮ್ಮ ಎದುರಿನಲ್ಲಿಯೇ ಸಂಬಂಧಿಸಿದ ಸಂಸ್ಥೆಯ ಪ್ರಾಂಶುಪಾಲರ ದೃಢೀಕರಣದೊಂದಿಗೆ ಪಡೆಯುವುದು ಹಾಗೂ ಸದರಿ ಪ್ರವೇಶ ಪತ್ರದ ಬಲಭಾಗದ ಜಾಗದಲ್ಲಿ ವಿದ್ಯಾರ್ಥಿ ಪರೀಕ್ಷೆಗೆ ಹಾಜರಾದ ವಿಷಯ ಹಾಗು ಅವರ ಸಹಿಯನ್ನು ದಿನಾಂಕದೊಂದಿಗೆ ಪಡೆಯುವುದು

ಕೇಂದ್ರ ಪರೀಕ್ಷಾ ಅಧೀಕ್ಷಕರ ಪುಸ್ತಕ (ಲಾಗ್ ಬುಕ್) ಕಛೇರಿಗೆ ಕಳುಹಿಸಬೇಡಿ.ಅದನ್ನು ಕೇಂದ್ರದಲ್ಲಿಯೇ ಇಡಿರಿ ಮತ್ತು ತನಿಖಾಧಿಕಾರಿಗಳು ಕೇಳಿದಾಗ ತೋರಿಸಬೇಕಾಗುತ್ತದೆ.

**6. <u>ಲೇಖನ ಸಾಮಗ್ರಿಯ ಲೆಕ್ಕ:–</u>**

ಲೇಖನ ಸಾಮಗ್ರಿಯ ಲೆಕ್ಕ (ಸ್ಟೇಷನರಿ ಅಕೌಂಟ್ಸ್) ವನ್ನು ಪ್ರತ್ಯೇಕ ಲಕೋಟೆಯಲ್ಲಿ ಪರೀಕ್ಷೆ ಮುಗಿದ 3 (ಮೂರು) ದಿನಗಳೊಳಗಾಗಿ **<u>" ಶ್ರೀಮತಿ ಹೇಮಲತಾ ಡಿ ನಾಯಕ್, ಸಹಾಯಕ ನಿರ್ದೇಶಕರು,</u>** ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–3 ಇವರ ಸ್ವಂತ ವಿಳಾಸಕ್ಕೆ ಕಳುಹಿಸಬೇಕು.

**7. <u>ಪರೀಕ್ಷೆಗೆ ಅನ್ವಯಿಸುವ ಸಿಬ್ಬಂದಿ ವಿವರ:–</u>**

ಪ್ರತಿ ಕೊಠಡಿಗೆ ಒಬ್ಬ ಮೇಲ್ವಿಚಾರಕರು (ಸೂಪರ್‌ವೈಸರ್) ಪ್ರತಿ 25 ಅಭ್ಯರ್ಥಿಗಳಿಗೆ ಅಥವಾ ಸಂಖ್ಯೆಗೆ ಒಬ್ಬರಂತೆ ಇದಕ್ಕಾಗಿ 25 ಅಥವಾ ಹೆಚ್ಚು ಅಭ್ಯರ್ಥಿಗಳಿಗೆ ಅವಕಾಶವಿರುವ ಎಲ್ಲಾ ಕೊಠಡಿ ಜಾಗವನ್ನು ಉಪಯೋಗಿಸತಕ್ಕದ್ದು.ಹೀಗೆ ಮಾಡಿದ ನಂತರ ಅದಕ್ಕಿಂತ ಚಿಕ್ಕ ಕೋಣೆಯನ್ನು ಉಪಯೋಗಿಸತಕ್ಕದ್ದು. ಸಂಭಾವನೆ ಬಿಲ್ಲಿಗೆ ಅಭ್ಯರ್ಥಿಗಳ ಪೀಠವ್ಯವಸ್ಥೆಯ (ಸೀಟಿಂಗ್ ಅರೇಂಜ್‌ಮೆಂಟ್ಸ್)ನಕ್ಷೆಯನ್ನು ಲಗತ್ತಿಸಿ 10 (ಹತ್ತು) ಮೇಲ್ವಿಚಾರಕರಿಗೆ (ಮತ್ತು ಉಳಿಕೆ ಅಂಶಕ್ಕೆ) ಬಿಡವು ಮೇಲ್ವಿಚಾರಕರನ್ನು (ರಿಲೀವಿಂಗ್ ಸೂಪರ್‌ವೈಸರ್) ರನ್ನು ನೇಮಿಸಬಹುದು ಒಟ್ಟು ಸಂಭಾವನೆ ಬಿಲ್ಲನ್ನು (ಕನ್ಸಾಲಿಡೇಟೆಡ್ ರೆಮ್ಯೂನರೇಷನ್ ಬಿಲ್) ನಿಯಮಿತ ನಮೂನೆಯಲ್ಲಿ ದ್ವಿಪ್ರತಿಯಲ್ಲಿ ತಯಾರಿಸಿ ಅವುಗಳನ್ನು ಡಿ.ಸಿ. ಬಿಲ್ಲು ಮತ್ತು ರಸೀತಿಗಳನ್ನು ರಿಜಿಸ್ಟರ್ಡ್ ಅಂಚೆ ಮೂಲಕ ಲೆಕ್ಕಾಧಿಕಾರಿಗಳು, ಲೆಕ್ಕ ಪತ್ರ ವಿಭಾಗ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ

ಮಲ್ಲೇಶ್ವರಂ, ಬೆಂಗಳೂರು–560003 ಇವರ ಸ್ವಂತ ವಿಳಾಸಕ್ಕೆ ಕಳುಹಿಸುವುದು. ಡಿ.ಸಿ. ಬಿಲ್ಲಿನಲ್ಲಿ ನೀರು ಕೊಡುವ ವ್ಯಕ್ತಿಯ ಇಲ್ಲವೇ ಜವಾನನ ಸಂಭಾವನೆಗಳೂ ಸೇರಿರಬೇಕು.ಪರೀಕ್ಷೆ ಮುಗಿದ ನಂತರ ಮೂರು ದಿನದೊಳಗಾಗಿ ಈ ಬಿಲ್ಲುಗಳನ್ನು ನಿಮ್ಮ ಸ್ವಂತ ವಿಳಾಸವಿರುವ ಎರಡು ಲಕೋಟೆಗಳ ಸಹಿತ ಕಳುಹಿಸಿಕೊಡಬೇಕು.

8. <u>ಸಾದಿಲ್ವಾರು ಖರ್ಚು (ಕಂಟೆನ್‌ಜನ್ಸಿ):–</u>

ಮುಖ್ಯ ಅಧೀಕ್ಷಕರುಗಳು ಅನೇಕ ಸಂದರ್ಭಗಳಲ್ಲಿ ಸಾದಿಲ್ವಾರು ಎನಿಸಿಕೊಳ್ಳದಿರುವ ವಸ್ತುಗಳಿಗೆಲ್ಲಾ ಹಣ ಖರ್ಚು ಮಾಡಿರುವುದು ಗಮನಕ್ಕೆ ಬಂದಿದೆ.ಪರೀಕ್ಷೆ ನಡೆಸಲು ಅಗತ್ಯವಾದ ಸಾದಿಲ್ವಾರು ಪದಾರ್ಥಗಳ ಪಟ್ಟಿಯನ್ನು ಈಗಾಗಲೇ ತಿಳಿಸಿರುತ್ತೆ.ಮತ್ತು ಅವುಗಳಲ್ಲಿ ಪರೀಕ್ಷೆ ನಡೆಸಲು ಅತ್ಯಗತ್ಯವಾದ ಮತ್ತು ಬೇಕಾಗುವಷ್ಟು ಮಾತ್ರ ಕೊಳ್ಳಲು ಸೂಚಿಸಿರುತ್ತೆ.ಅನಾವಶ್ಯಕವೆಂದು ಕಂಡು ಬರುವ ಖರ್ಚುಗಳನ್ನು ಯಾವುದೇ ಕಾರಣದಿಂದಾಗಲೀ ಭರಿಸಲಾಗುವುದಿಲ್ಲ. ಮತ್ತು ಬಿಲ್ಲಿನಲ್ಲಿ ಅಂತಹ ಮೊಬಲಗನ್ನು ಕಡಿತಗೊಳಿಸಲಾಗುವುದು. ಸಾದಿಲ್ವಾರು ಖರ್ಚು ಬಾಬ್ತಿನ ಮುಖ್ಯ ಅಂಶಗಳೆಂದರೆ:–

1) ಉತ್ತರ ಪುಸ್ತಕಗಳನ್ನು ಕಳುಹಿಸಲು ಆಗುವ ಇನ್‌ಷೂರ್ಡ್ ಅಂಚೆ ವೆಚ್ಚ

2) ಉತ್ತರ ಪತ್ರಿಕೆ ಗಂಟು ಕಟ್ಟಲು ಪ್ರತಿ ಚೀಲಕ್ಕೆ ಅರ್ಧ ಮೀಟರಿನಂತೆ ಸರ್ಕಾರದಿಂದ ಗೊತ್ತುಪಡಿಸಿರುವ ಬಗ್ಗೆ ಕಂಟ್ರೋಲ್ಡ್ ಕ್ಲಾತ್‌ಗಳನ್ನು ಮಾತ್ರ ಕೊಳ್ಳಬೇಕು

3) ಅವಶ್ಯಕವಾಗುವಷ್ಟು ಅರಗು, ಮೇಣದ ಬತ್ತಿ, ಗೋಂದು (ಹೆಚ್ಚು ಬೆಲೆಯ ಸೀಸೆಯಲ್ಲಿನ ಗೋಂದಿನ ಖರ್ಚನ್ನು ಕೊಡಲಾಗುವುದಿಲ್ಲ.)ಮೈದಾ ಹಿಟ್ಟಿನಿಂದ ಗೋಂದು ತಯಾರು ಮಾಡಿ ಉಪಯೋಗಿಸಬಹುದು.

**9. <u>ಪರೀಕ್ಷಾ ಕಾರ್ಯಕ್ಕೆ ನೇಮಿಸಲ್ಪಟ್ಟವರಿಗೆ ಈ ಕೆಳಗಿನಂತೆ ಸಂಭಾವನೆಯನ್ನು ನೀಡಲಾಗುತ್ತದೆ.</u>**

| | | |
|---|---|---|
| **1) ಮುಖ್ಯ ಅಧೀಕ್ಷಕರಿಗೆ** | **–** | **ರೂ.75–00 ದಿನಕ್ಕೆ** |
| **2) ಉಪ ಅಧೀಕ್ಷಕರು** | **–** | **ರೂ. 60–00 ದಿನಕ್ಕೆ** |
| **3) ಕೊಠಡಿ ಅಧೀಕ್ಷಕರಿಗೆ** | **–** | **ರೂ.50–00 ದಿನಕ್ಕೆ** |
| **4) ಸಹಾಯಕರು** | **–** | **ರೂ.45–00 ದಿನಕ್ಕೆ** |
| **5) ಗ್ರೂಪ್–ಡಿ (ನೀರು ಕೊಡುವ ವ್ಯಕ್ತಿ)** | **–** | **ರೂ.35–00 ದಿನಕ್ಕೆ** |

<u>ಇ ತ ರೆ:–</u>

1. ಈ ತಿಳುವಳಿಕೆಯನ್ನು ಕೇಂದ್ರದ ಶಾಲೆಯ ಮುಖ್ಯೋಪಾಧ್ಯಾಯರ ವಶಕ್ಕೆ ಪರೀಕ್ಷೆ ಮುಗಿದ ನಂತರ ಕೊಡತಕ್ಕದ್ದು. ಮುಂದಿನ ಪರೀಕ್ಷೆಗೂ ಇದು ಅನ್ವಯಿಸುವ ಸಾಧ್ಯತೆ ಇರುವುದರಿಂದ ಈ ತಿಳುವಳಿಕೆ ಸುತ್ತೋಲೆಯನ್ನು ಪ್ರತಿ ಕೇಂದ್ರದಲ್ಲೂ ಮುಂದಿನ ಅಧೀಕ್ಷಕರ ಉಪಯೋಗಕ್ಕೆ ಸಿಗುವಂತೆ ಇಡತಕ್ಕದ್ದು. ಹೆಸರಿನ ಪಟ್ಟಿಯಲ್ಲಿ ತಿರಸ್ಕರಿಸಿದೆ ಎಂದು

ನಮೂದಿಸಿರುವ ಅಭ್ಯರ್ಥಿಗಳನ್ನು ಯಾವುದೇ ಕಾರಣದಿಂದಲೂ ಪರೀಕ್ಷೆಗೆ ಹಾಜರಾಗಲು ಅನುಮತಿ ನೀಡಬಾರದು.ಅತೀ ಜರೂರು ಸಂದರ್ಭಗಳಲ್ಲಿ ಮಂಡಳಿಯ ಅಧಿಕಾರಿಗಳನ್ನು ಈ ಕೆಳಕಂಡ ದೂರವಾಣಿ ಸಂಖ್ಯೆಗಳಲ್ಲಿ ಸಂಪರ್ಕಿಸಬಹುದು.

**ಮಾನ್ಯ ನಿರ್ದೇಶಕರ ದೂರವಾಣಿ ಸಂಖ್ಯೆ –** >>>> **23360108**

**ಮಾನ್ಯ ಕಾರ್ಯದರ್ಶಿಗಳ ದೂರವಾಣಿ ಸಂಖ್ಯೆ –** >>>>**23445579**

**ಶ್ರೀಮತಿ ಶ್ರೀವಲ್ಲಿ ಎನ್ – ಕಛೇರಿ** >>>> **23360109**

**ಸಹಾಯಕ ನಿರ್ದೇಶಕರು – ಮೊಬೈಲ್**>>>>**9686333455**

ಸಹಿ/–

ನಿರ್ದೇಶಕರು
(ಇತರೆ ಪರೀಕ್ಷೆಗಳು)

1) ಎಲ್ಲಾ ಪರೀಕ್ಷಾ ಕೇಂದ್ರಗಳ ಮುಖ್ಯ ಅಧೀಕ್ಷಕರಿಗೆ
2) ಸಂಬಂಧಿಸಿದ ಎಲ್ಲಾ ಜಿಲ್ಲಾ ಡಯಟ್ ಪ್ರಾಂಶುಪಾಲರುಗಳಿಗೆ
3) ಕಛೇರಿ ಪ್ರತಿ

ಸಂಖ್ಯೆ:ಡಬ್ಲ್ಯೂ2/.ಹಿಂ.ಶಿ.ಪ/ಮೇ2014/ಅಂ.ಪ.ರ/27/2014-15 ದಿನಾಂಕ: 22.09.2014

**ಜ್ಞಾಪನ**

ವಿಷಯ: ಮೇ 2014ರ ಹಿಂದಿಶಿಕ್ಷಕ್ ತರಬೇತಿ ಪರೀಕ್ಷೆಯ ಉತ್ತೀರ್ಣ ಮತ್ತು ಅನುತ್ತೀರ್ಣ ಅಂಕಪಟ್ಟಿಗಳನ್ನು ರಾಜ್ಯದ ಎಲ್ಲಾ ಹಿಂದಿಶಿಕ್ಷಕ್ ತರಬೇತಿ ಕೇಂದ್ರಗಳಿಗೆ ರವಾನಿಸುವ ಬಗ್ಗೆ.

***

ಮೇ 2014ರ ಮೇ ಮಾಹೆಯಲ್ಲಿ ನಡೆದ ಹಿಂದಿಶಿಕ್ಷಕ್ ಪರೀಕ್ಷೆಗೆ ಹಾಜರಾಗಿ ಉತ್ತೀರ್ಣ ಮತ್ತು ಅನುತ್ತೀರ್ಣರಾದ ಅಭ್ಯರ್ಥಿಗಳ ಅಂಕಪಟ್ಟಿಗಳನ್ನು (ಎಂ.ಎಸ್.ಎ) ರವಾನಿಸಲಾಗಿದೆ.ಈ ಬಗ್ಗೆ ಸಂಬಂಧಿಸಿದ ಎಲ್ಲಾ ಹಿಂದಿ ಶಿಕ್ಷಕ್ ತರಬೇತಿ ಕೇಂದ್ರಗಳ ಪ್ರಾಚಾರ್ಯರು ಅಭ್ಯರ್ಥಿಗಳಿಗೆ ಅಂಕಪಟ್ಟಿಗಳನ್ನು ವಿತರಿಸುವ ಮೊದಲು ಈ ಕೆಳಕಂಡ ಅಂಶಗಳನ್ನು ಎಚ್ಚರಿಕೆಯಿಂದ ಗಮನಿಸಲು ಸೂಚಿಸಿದೆ.ಇಲ್ಲದಿದ್ದಲ್ಲಿ ಮುಂದಿನ ಆಗು ಹೋಗುಗಳಿಗೆ ನಿಮ್ಮನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು.

1. ನಿಮ್ಮ ಕಾಲೇಜಿಗೆ ಸಂಬಂಧಿಸಿದ ಉತ್ತೀರ್ಣರಾದ ಮತ್ತು ಅನುತ್ತೀರ್ಣರಾದ ಎಲ್ಲಾ ಅಭ್ಯರ್ಥಿಗಳ ಅಂಕಪಟ್ಟಿಗಳು ಬಂದಿದೆಯೇ ಎಂದು ಪರಿಶೀಲಿಸುವುದು. ಕಡಿಮೆ ಇದ್ದಲ್ಲಿ ತಕ್ಷಣವೇ ಪರೀಕ್ಷಾ ಮಂಡಳಿಯ ಗಮನಕ್ಕೆ ತರುವುದು.
2. ಕಾಲೇಜಿನ ಮುಖ್ಯಸ್ಥರು ಅಭ್ಯರ್ಥಿಯ ಉತ್ತೀರ್ಣ ಮತ್ತು ಅನುತ್ತೀರ್ಣ ಅಂಕಪಟ್ಟಿಯಲ್ಲಿ ಪಡೆದಿರುವ ಅಂಕಗಳು, ಅಭ್ಯರ್ಥಿಯ ಹೆಸರು, ತಂದೆಯ ಹೆಸರು, ಎಸ್.ಎಸ್.ಎಲ್.ಸಿ. ಅಂಕಪಟ್ಟಿಯಲ್ಲಿದ್ದಂತೆ ಅಥವಾ ಶಾಲಾ ದಾಖಲಾತಿಯಲ್ಲಿದ್ದಂತೆ ಸ್ಪಷ್ಟವಾಗಿ ಇದೆಯೇ ಇಲ್ಲವೇ ಎಂದು ಗಮನಿಸುವುದು.
3. ಅಭ್ಯರ್ಥಿಯ ಹೆಸರು, ತಂದೆಯ ಹೆಸರು ಹಾಗೂ ಅಡ್ಡ ಹೆಸರಿನಲ್ಲಿ ತಿದ್ದುಪಡಿ ಇದ್ದಲ್ಲಿ ಅಥವಾ ಅಂಕಪಟ್ಟಿಯಲ್ಲಿ ಕಾರ್ಯದರ್ಶಿಯವರ ಸಹಿ ಇಲ್ಲದೇ ಇದ್ದ ಸಂದರ್ಭದಲ್ಲಿ ಅಂತಹ ಮೂಲ ಅಂಕಪಟ್ಟಿಯನ್ನು ತಕ್ಷಣವೇ ಮಂಡಳಿಗೆ ಹಿಂದಿರುಗಿಸಿ ದೋಷ ತಿದ್ದುಪಡಿ ಮಾಡಿಕೊಳ್ಳತಕ್ಕದ್ದು. ಇದರೊಂದಿಗೆ ಅಭ್ಯರ್ಥಿಯ ಎಸ್.ಎಸ್.ಎಲ್.ಸಿ. ಮೂಲ ಪ್ರಮಾಣ ಪತ್ರ ಹಾಗೂ ಎಸ್.ಎಸ್.ಎಲ್.ಸಿ. ಅಂಕಪಟ್ಟಿಯ ದೃಢೀಕೃತ ಜೆರಾಕ್ಸ್ ಪ್ರತಿಯನ್ನು ಸಲ್ಲಿಸತಕ್ಕದ್ದು.
4. ಬೇರೆ ಕಾಲೇಜಿನ ಅಂಕಪಟ್ಟಿಗಳು ತಮ್ಮ ಕಾಲೇಜಿಗೆ ಬಂದಲ್ಲಿ ಕೂಡಲೇ ಮರು ಟಪಾಲಿನಲ್ಲಿ ಶ್ರೀಮತಿ ಶ್ರೀವಲ್ಲಿ. ಎನ್, ಸಹಾಯಕ ನಿರ್ದೇಶಕರು, ಹಿಂದಿಶಿಕ್ಷಕ್ ಶಾಖೆ, 4ನೇ ಮಹಡಿ, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು-03 ಈ ವಿಳಾಸಕ್ಕೆ ಸಲ್ಲಿಸಲು ತಿಳಿಸಿದೆ.

ಸೂಚನೆ:- ಅಂಕಪಟ್ಟಿಯ ದೋಷ ತಿದ್ದುಪಡಿಯ ಪ್ರಕರಣಗಳಿಗೆ ಮಂಡಳಿ ನಿಯಮಾನುಸಾರ ರೂ.100/-ಗಳ ಶುಲ್ಕ ವಿಧಿಸಿ ಸರಿಪಡಿಸಲಾಗುವುದು. ಸದರಿ ಮೊತ್ತವನ್ನು NEFTಚಲನ್ ಮೂಲಕ ಪಾವತಿಸಿ ಹಿಂದಿಶಿಕ್ಷಕ್ ಪರೀಕ್ಷೆಯ ಮೂಲ ಅಂಕಪಟ್ಟಿ ಮತ್ತು ಮೇಲೆ ತಿಳಿಸಿದ ದಾಖಲೆಗಳೊಂದಿಗೆ ಸಲ್ಲಿಸತಕ್ಕದ್ದು.

ಮಂಡಳಿಯ ಸ್ಥಿರ ದೂರವಾಣಿ ಸಂಖ್ಯೆಗಳು : 080-23360108, 23360109
ಫ್ಯಾಕ್ಸ್ ಸಂಖ್ಯೆ : 080-23311146

1) ಉತ್ತೀರ್ಣ ಅಂಕಪಟ್ಟಿಗಳ ಸಂಖ್ಯೆ : ---------
2) ಅನುತ್ತೀರ್ಣ ಅಂಕಪಟ್ಟಿಗಳ ಸಂಖ್ಯೆ : --------

ನಿರ್ದೇಶಕರು
(ಇತರೆ ಪರೀಕ್ಷೆಗಳು)

ಪ್ರತಿಯನ್ನು:-
1) ರಾಜ್ಯದ ಎಲ್ಲಾ ಹಿಂದಿಶಿಕ್ಷಕ್ ತರಬೇತಿ ಕೇಂದ್ರಗಳ ಪ್ರಾಚಾರ್ಯರುಗಳಿಗೆ
2) ಕಛೇರಿ ಪ್ರತಿ.

**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು-03**

ಸಂಖ್ಯೆ:ಡಬ್ಲ್ಯು2–ಹಿಂ.ಶಿ.ಪ.2012–ಪ್ರಾ.ಪ.2012 ದಿನಾಂಕ 29–05–2012

ಮುಖ್ಯ ಅಧೀಕ್ಷಕರು/ಛೇರ್‌ಮನ್

ಪ್ರಾಯೋಗಿಕ ಪರೀಕ್ಷೆ ಹಿಂದಿ ಶಿಕ್ಷಕ್ ಕೋರ್ಸ್

...............................................

...............................................

...............................................

ಮಾನ್ಯರೆ,

ವಿಷಯ : ಮೇ 2012 ಹಿಂದಿ ಶಿಕ್ಷಕ್ ಕೋರ್ಸಿನ ಪ್ರಾಯೋಗಿಕ ಪರೀಕ್ಷೆಯನ್ನು ನಡೆಸುವ ಬಗ್ಗೆ ಅಧೀಕ್ಷಕರಿಗೆ ಸೂಚನೆಗಳು

******

1. **ಅನೆಕ್ಷರ್ –ಎ**
   ವಿದ್ಯಾರ್ಥಿಗಳ ಪರೀಕ್ಷಾ ವೇಳಾಪಟ್ಟಿ ಆಗಿದ್ದು ಇದನ್ನು ಪ್ರಾಯೋಗಿಕ ಪರೀಕ್ಷೆಯ ಅಧೀಕ್ಷಕರಿಂದ ಒಪ್ಪಿಗೆ ಪಡೆದು

ಸಂಸ್ಥೆಯ ಪ್ರಾಂಶುಪಾಲರು ಪ್ರಾಯೋಗಿಕ ಪರೀಕ್ಷೆಯ ಎರಡು ದಿನ ಮುಂಚೆ ಸಂಸ್ಥೆಯಲ್ಲಿ ಪ್ರಕಟಿಸುವುದು.

2. **ಅನೆಕ್ಷರ್ –ಬಿ**
   ವಿದ್ಯಾರ್ಥಿಗಳ ಹಾಜರಿಪತ್ರವಾಗಿದ್ದು ಇದರಲ್ಲಿ ಪ್ರತಿದಿನ ಪರೀಕ್ಷಾ ಮುಖ್ಯಸ್ಥರು ವಿದ್ಯಾರ್ಥಿಗಳಿಂದ ಸಹಿ ಪಡೆಯುವುದು.

3. **ಫಾರಂ–1**
   ಇದು ಪ್ರತಿ ವಿದ್ಯಾರ್ಥಿಯ ಪಾಠಬೋಧನಾ ತ:ಖ್ತೆಯಾಗಿದ್ದು, ವಿದ್ಯಾರ್ಥಿಯ 40 ನಿಮಿಷಗಳ ಪ್ರಾಯೋಗಿಕ ಪಾಠದ ಸಂಪೂರ್ಣ ಮಾಹಿತಿಯನ್ನು ಒಳಗೊಂಡಿದ್ದು ಪ್ರತಿ ವಿಭಾಗಕ್ಕೆ ನಿಗಧಿಪಡಿಸಿರುವ ಅಂಕಗಳನ್ನು ನೀಡಲಾಗಿದೆ. ಪಾಠ ವೀಕ್ಷಕರಿಂದ ಇದನ್ನು ತುಂಬಿಸಿ ಅಧೀಕ್ಷಕರು ಪಡೆಯುವುದು.

4. **ಫಾರಂ–2**
   ಇದನ್ನು ಪ್ರತಿ ಪರೀಕ್ಷಕರು (ಪಾಠ ವೀಕ್ಷಕರು) ವಿದ್ಯಾರ್ಥಿಗಳ ಪಾಠ ವೀಕ್ಷಿಸಿದ ನಂತರ ಆ ದಿನ ಅವರು ವೀಕ್ಷಿಸಿದ ವಿದ್ಯಾರ್ಥಿಗಳ ನೊಂದಣಿ ಸಂಖ್ಯೆಯೊಂದಿಗೆ ವಿದ್ಯಾರ್ಥಿಗೆ ನೀಡಿದ ಅಂಕಗಳನ್ನು ತುಂಬಿಸಿ ಸಹಿ ಮಾಡಿ ಪರೀಕ್ಷಾ ಮುಖ್ಯ ಅಧೀಕ್ಷಕರಿಗೆ ಸಲ್ಲಿಸುವುದು.

5. **ಫಾರಂ–2ಎ**
   ಇದನ್ನು ಸಂಪೂರ್ಣವಾಗಿ ಪರೀಕ್ಷಾ ಮುಖ್ಯ ಅಧೀಕ್ಷಕರು ತುಂಬುವುದು.

6. ಈ ಬಾರಿ ಮಂಡಳಿಯಿಂದ ಪ್ರಾಯೋಗಿಕ ಪರೀಕ್ಷೆಯ ಅಂಕಗಳನ್ನು ನಮೂದಿಸಲು ಸ್ಕ್ಯಾನ್ ಮಾಡಬಹುದಾದ ಓ.ಎಂ.ಆರ್ ಶೀಟ್‌ಗಳನ್ನು ಕಳುಹಿಸಿದ್ದು, ಅದರಲ್ಲಿ ವಿಷಯ ಹಾಗೂ ನೋಂದಣಿಸಂಖ್ಯೆವಾರು ಅಂಕಗಳನ್ನು ನಮೂದಿಸಿ ನಿಖರವಾಗಿ, ಸ್ಪಷ್ಟವಾಗಿ ಶೇಡ್ ಮಾಡಿ ಅಗತ್ಯ ಸಹಿ ಹಾಗೂ ದೃಢೀಕರಣಗಳನ್ನು ಮಾಡಿ ಸಲ್ಲಿಸುವುದು.

ಮಾದರಿ ನಮೂನೆಗಳನ್ನು ಇದರೊಂದಿಗೆ ಮುಂದಿನ ಕ್ರಮಕ್ಕಾಗಿ ಲಗತ್ತಿಸಿದೆ.ಎಲ್ಲಾ ಲಗತ್ತುಗಳನ್ನು ಸರಿಯಾಗಿ ತುಂಬಿ ಮಂಡಳಿಗೆ ಮೊಹರು ಮಾಡಿದ ಲಕೋಟೆಯಲ್ಲಿರಿಸಿ ಪರೀಕ್ಷೆಗಳು ಮುಗಿದ, 03ದಿನಗಳೊಳಗೆ ಮಂಡಳಿಗೆ ತಲುಪುವಂತೆ ಸಲ್ಲಿಸುವುದು.

**ಸೂಚನೆಗಳು** :–

1. ಪ್ರಾಯೋಗಿಕ ಪರೀಕ್ಷೆಯ ಮುಖ್ಯ ಅಧೀಕ್ಷಕರು ಪರೀಕ್ಷೆಗಳು ಪ್ರಾರಂಭವಾಗುವ ಮೊದಲೆ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳನ್ನು ಖುದ್ದಾಗಿ ಭೇಟಿ ಮಾಡಿ ಪ್ರಾಯೋಗಿಕ ಪರೀಕ್ಷೆಯನ್ನು ನಡೆಸಲು ಕೇಂದ್ರಸ್ಥಾನದಲ್ಲಿರುವಂತಹ ಹಾಗೂ ಸದರಿ ಪರೀಕ್ಷೆಯನ್ನು ನಡೆಸಲು ಸೂಕ್ತವಾದಂತಹ ಯಾವುದಾದರೂ ಸರ್ಕಾರಿ ಶಾಲೆಯನ್ನು ಆಯ್ಕೆ ಮಾಡುವುದು.
2. ಸದರಿ ಪರೀಕ್ಷೆಯಲ್ಲಿ ಪಾಠ ವೀಕ್ಷಣೆ ಮಾಡಲು ಬೋರ್ಡ್‌ಗಳನ್ನು ಮಾಡಿ ಪ್ರತಿ ಬೋರ್ಡ್‌ನಲ್ಲಿ 20 ಸದಸ್ಯರನ್ನು ನೇಮಿಸುವುದು. ಬಾಹ್ಯ ಪರೀಕ್ಷಕರಾಗಿ ಕಾರ್ಯನಿರ್ವಹಿಸಲು ನುರಿತ ಅನುಭವವಿರುವ ಶಿಕ್ಷಕರುಗಳ ಹಿಂದಿ ಶಿಕ್ಷಕರನ್ನು ಹಿಂದಿ ಪಾಠ ವೀಕ್ಷಣೆ ಮಾಡಲು ಹಾಗೂ ಕನ್ನಡ ಶಿಕ್ಷಕರನ್ನು ಕನ್ನಡ ಪಾಠ ವೀಕ್ಷಣೆ ಮಾಡಲು ಆಯ್ದ ಶಿಕ್ಷಕರ ಹೆಸರು, ವಿದ್ಯಾರ್ಹತೆ ಹಾಗೂ ಸೇವಾ ವಿವರಗಳನ್ನೊಳಗೊಂಡ ಮಾಹಿತಿ ಪತ್ರವನ್ನು ಬಿ.ಇ.ಓ ರವರಿಂದ ಮೇಲು ಸಹಿ ಮಾಡಿಸಿ ಆ ಪತ್ರವನ್ನು ಮಂಡಳಿಗೆ ಕಳುಹಿಸುವುದು.
3. ಆಯ್ದ ಎಲ್ಲಾ ಬಾಹ್ಯ ಪರೀಕ್ಷಕರೊಂದಿಗೆ ಸದರಿ ಸಂಸ್ಥೆಯ ಉಪನ್ಯಾಸಕರುಗಳಲ್ಲಿ ಹಿರಿಯರನ್ನು ಆಯ್ಕೆ ಮಾಡಿ ಅವರನ್ನು ಆಂತರಿಕ ಪರೀಕ್ಷಕರನ್ನಾಗಿ ನೇಮಿಸುವುದು.
4. ಪರೀಕ್ಷಾಪೂರ್ವ ದಿನದಂದು ಈ ಎಲ್ಲಾ ಪರೀಕ್ಷಕರ ಸಭೆ ಕರೆದು ಪಾಠ ವೀಕ್ಷಣೆಯ ಬಗ್ಗೆ ಮಾಹಿತಿ ತಿಳಿಸಿ ಈ ಮೇಲೆ ಹೇಳಿರುವ ಎಲ್ಲಾ ಫಾರಂಗಳನ್ನು ತುಂಬುವ ವಿಧಾನಗಳನ್ನು ಅವರಿಗೆ ತಿಳಿಸಿ, ಅವರನ್ನು ಪರೀಕ್ಷಾ ಕಾರ್ಯಕ್ಕೆ ನೇಮಿಸಿರುವ ಬಗ್ಗೆ ನೇಮಕಾತಿ ಪತ್ರ ನೀಡಿ ಅದಕ್ಕೆ ಅವರಿಂದ ಒಪ್ಪಿಗೆ ಪತ್ರ ಪಡೆಯುವುದು.
5. ಪ್ರತಿ ಸಂಸ್ಥೆಯಿಂದ ಪರೀಕ್ಷೆ ತೆಗೆದುಕೊಳ್ಳುವ ವಿದ್ಯಾರ್ಥಿಗಳಿಗನುಗುಣವಾಗಿ ಪ್ರಾಯೋಗಿಕ ಪರೀಕ್ಷೆಯ ಪರೀಕ್ಷಕರ ಬೋರ್ಡ್ ಮಾಡುವುದು. (ಪ್ರತಿ ಬೋರ್ಡ್ ದಿನಕ್ಕೆ ಕನಿಷ್ಠ 6 ಪಾಠಗಳನ್ನು ವೀಕ್ಷಿಸುವುದು ಹಾಗೂ ಒಟ್ಟಾರೆ ಕನಿಷ್ಠ 20 ವಿದ್ಯಾರ್ಥಿಗಳ ಪರಿವೀಕ್ಷಣೆ ಮಾಡುವುದು)
6. ಪ್ರತಿ ದಿನ ಬೋರ್ಡಿನ ಸದಸ್ಯರ ಅಂತರ್ ಬದಲಾವಣೆ ಮಾಡುವುದು ಹಾಗೂ ಪ್ರತಿ ಪಾಠ ವೀಕ್ಷಣೆ ನಂತರ ಅವರು ನೀಡುವ ಅಂಕಪಟ್ಟಿ (ಫಾರಂ–2) ಹಾಗೂ ಪಾಠವೀಕ್ಷಣೆ ತ:ಖ್ತೆ (ಫಾರಂ–1)ಯನ್ನು ಸ್ವೀಕರಿಸಿ ಅದನ್ನು ಗೌಪ್ಯವಾಗಿರಿಸಿ ಎಲ್ಲಾ ಇತರೆ ಲಗತ್ತುಗಳೊಡನೆ (ಅನೆಕ್ಸರ್ 1, 2 ಮತ್ತು ಫಾರಂ–2ಎ) ಮಂಡಳಿಯ ಕೆಳಕಂಡ ವಿಳಾಸಕ್ಕೆ 3 ದಿನದೊಳಗಾಗಿ ಸಲ್ಲಿಸುವುದು.

ಸಹಾಯಕ ನಿರ್ದೇಶಕರು (ಇತರೆ ಪರೀಕ್ಷೆಗಳು)
ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ,
4ನೇ ಮಹಡಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ,
ಬೆಂಗಳೂರು–560003
ಹಾಗೂ ಲಕೋಟೆಯ ಮೇಲೆ ಈ ಕೆಳಕಂಡಂತೆ ನಮೂದಿಸುವುದು.
ಹಿಂದಿ ಶಿಕ್ಷಕ್ ಪ್ರಾಯೋಗಿಕ ಪರೀಕ್ಷೆ 2012
ಅ) ಪರೀಕ್ಷಾ ಕೇಂದ್ರದ ಹೆಸರು ಹಾಗೂ ವಿಳಾಸ
ಆ) ಪರೀಕ್ಷಾ ಕೇಂದ್ರದ ಕೋಡ್

7. ಪುನರಾವರ್ತಿತ ಅಭ್ಯರ್ಥಿಗಳು ಈ ಬಾರಿ ಪರೀಕ್ಷೆ ತೆಗೆದುಕೊಳ್ಳುತ್ತಿದ್ದರೆ ಅಂತಹವರಿಗೆ ನೊಂದಣಿಸಂಖ್ಯೆ ನಮೂದಿಸಿ, ಕೆಂಪು ಶಾಯಿಯಲ್ಲಿ "ಆರ್" ಎಂದು ನಮೂದಿಸಿ ಬೇರೆ ಅಂಕಪಟ್ಟಿ ಕಳುಹಿಸತಕ್ಕದ್ದು.

8. ಪ್ರಾಯೋಗಿಕ ಪರೀಕ್ಷೆಯಲ್ಲಿ ಪರೀಕ್ಷಕರು ವಿದ್ಯಾರ್ಥಿಗಳ ಅರ್ಹತೆಗಿಂತ ಹೆಚ್ಚು ಅಂಕ ನೀಡದಂತೆ ಕ್ರಮತೆಗೆದುಕೊಂಡು ಪರೀಕ್ಷೆಯನ್ನು ಕಾಲಮಿತಿಯಲ್ಲಿ ಯಾವುದೇ ತರಹದ ಅವ್ಯವಹಾರ ನಡೆಯದಂತೆ ಎಚ್ಚರ ವಹಿಸುವುದು. ಯಾವುದೇ ಅವ್ಯವಹಾರ ಕಂಡುಬಂದಲ್ಲಿ ಮಂಡಳಿಗೆ ತಿಳಿಸುವುದು.

9. ಪ್ರತಿ ಪರೀಕ್ಷಕರಿಗೆ ನೀಡುವ ಸಂಭಾವನೆ ವಿವರಗಳು ಈ ಕೆಳಗಿನಂತಿದೆ.

| ಕ್ರ. ಸಂ | ವಿಷಯ | ಸಂಭಾವನೆ | ಪ್ರವಾಸ ಭತ್ಯೆ-ದಿನಭತ್ಯೆ |
|---|---|---|---|
| 1 | ಕೊಠಡಿ ಮೇಲ್ವಿಚಾರಕರಿಗೆ ಪಾಠ ವೀಕ್ಷಣೆಗೆ ಪ್ರತಿ ಪಾಠಕ್ಕೆ | ರೂ.06-50 | ಬೆಂಗಳೂರು ರೂ. 50-00<br>ಇತರೆ-ಕೆ.ಸಿ.ಎಸ್.ಆರ್.<br>ನಿಯಮಾವಳಿಯಂತೆ ದಿನಭತ್ಯೆ ಮತ್ತು ಪ್ರಯಾಣ ಭತ್ಯೆ |
| 2 | ಪರೀಕ್ಷಾ ಕೇಂದ್ರ ಮುಖ್ಯಸ್ಥರಿಗೆ ಸಂಭಾವನೆ ಪ್ರತಿ ದಿನಕ್ಕೆ | ರೂ.50-00 | |
| 3 | ಡಿ-ದರ್ಜೆ ನೌಕರರಿಗೆ ಪ್ರತಿ ದಿನಕ್ಕೆ ಒಬ್ಬರು | ರೂ.15-00 | |

ಪರೀಕ್ಷೆ ತೆಗೆದುಕೊಳ್ಳುವ ವಿದ್ಯಾರ್ಥಿಗಳಿಗನುಗುಣವಾಗಿ ಸಂಭಾವನೆ ಮೊಬಲಗನ್ನು ಮುಂಗಡವಾಗಿ ಚೆಕ್ ಮೂಲಕ ನೀಡಲಾಗಿದೆ. ಮೇಲ್ಕಂಡ ನಿಯಮದಂತೆ ಸಂಭಾವನೆ ನೀಡಿ ಅಗತ್ಯ ರಸೀದಿ ಹಾಗೂ ಸಂಭಾವನೆ ಬಿಲ್ಲನ್ನು

ಲೆಕ್ಕಾಧಿಕಾರಿಗಳು, 2ನೇ ಮಹಡಿ,
ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ,
ಮಲ್ಲೇಶ್ವರಂ, ಬೆಂಗಳೂರು-03
ಇವರ ವೈಯಕ್ತಿಕ ವಿಳಾಸಕ್ಕೆ ಕಳುಹಿಸುವುದು.ಹಣ ಉಳಿದಲ್ಲಿ ಮಂಡಳಿಗೆ ಡಿ.ಡಿ ಮೂಲಕ ಹಿಂದಿರುಗಿಸತಕ್ಕದ್ದು.

ತಮ್ಮ ನಂಬುಗೆಯ,

ಸಹಿ/-
ನಿರ್ದೇಶಕರು
(ಇತರೆ ಪರೀಕ್ಷೆಗಳು)

1) ಪ್ರತಿಯನ್ನು ಸಂಬಂಧಪಟ್ಟ ಎಲ್ಲಾ ಡಯಟ್ ಪ್ರಾಂಶುಪಾಲರುಗಳಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
2) ಸಂಬಂಧಪಟ್ಟ ಎಲ್ಲಾ ಹಿಂದಿಶಿಕ್ಷಕ್ ತರಬೇತಿ ಸಂಸ್ಥೆಗಳ ಪ್ರಾಂಶುಪಾಲರುಗಳಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
3) ಕಛೇರಿ ಪ್ರತಿ.

**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು-03**

ಸಂಖ್ಯೆ:ಡಬ್ಲ್ಯೂ2/ಹಿಂ.ಶಿ/ಪ.ಫ.ಮೇ2015/32/2015-16 ದಿನಾಂಕ: 30.06.2015

**ಜ್ಞಾಪನ**

ವಿಷಯ: ಮೇ 2015ರಲ್ಲಿ ನಡೆದ ಹಿಂದಿಶಿಕ್ಷಕ್ ಕೋರ್ಸ್ ಪರೀಕ್ಷೆಯ ಫಲಿತಾಂಶ ಪ್ರಕಟಣೆ ಬಗ್ಗೆ.

***

ಮೇ 2014ರಲ್ಲಿ ನಡೆದ ಹಿಂದಿಶಿಕ್ಷಕ್ ಪರೀಕ್ಷೆಯ ಫಲಿತಾಂಶ ಪಟ್ಟಿಯನ್ನು ಈ ಪತ್ರದೊಂದಿಗೆ ಕಳುಹಿಸಿಕೊಡಲಾಗಿದೆ. ಪ್ರಾಚಾರ್ಯರು ದಿನಾಂಕ:-----------ರಂದು ಬೆಳಿಗ್ಗೆ 11.00ಘಂಟೆಗೆ ವಿದ್ಯಾಲಯದಲ್ಲಿ ಪ್ರಕಟಿಸುವುದು.

ಫಲಿತಾಂಶ ಎಲ್ಲಾದರೂ ತಪ್ಪಾಗಿ ನಮೂದಿತವಾಗಿದ್ದಲ್ಲಿ ಅಂತಹ ಫಲಿತಾಂಶಗಳನ್ನು ನಿಯಮದಂತೆ ತಿದ್ದುಪಡಿ ಮಾಡಿ ಆ ಬಗ್ಗೆ ಅವಶ್ಯವೆನಿಸಿದಲ್ಲಿ ಕಾನೂನಿಗನುಗುಣವಾಗಿ ದೃಢಪಡಿಸಿ ತಿದ್ದುಪಡಿ ಮಾಡುವ ಅಧಿಕಾರವನ್ನು ಮಂಡಳಿಯು ಹೊಂದಿರುತ್ತದೆ.The Mysore Secondary Education Board Act 1966ರ Publication of Result ನಿಯಮ-20ರ ಪ್ರಕಾರ ವಿಶೇಷ ಪರಿಸ್ಥಿತಿಯಲ್ಲಿ ಅಂದರೆ ಪರೀಕ್ಷೆಯ ದುರಾಚರಣೆ ವಂಚನೆ, ಅನುಚಿತ ವರ್ತನೆ, ಮೊದಲಾದವುಗಳಿಂದ ಪ್ರಭಾವಿತವಾಗಿದೆ ಎಂದು ಕಂಡುಬಂದಲ್ಲಿ ಅಂತಹ ಫಲಿತಾಂಶವನ್ನು ಪರೀಕ್ಷಾ ಫಲಿತಾಂಶ ಪ್ರಕಟವಾದ 60 ದಿನಗಳ ನಂತರವೂ ತಿದ್ದುಪಡಿ ಮಾಡುವ ಅಧಿಕಾರವನ್ನು ಮಂಡಳಿ ಹೊಂದಿರುತ್ತದೆ.

2009-10ನೇ ಸಾಲಿನ ಪರೀಕ್ಷೆಯಿಂದ ಉತ್ತರ ಪತ್ರಿಕೆಗಳಲ್ಲಿನ ಅಂಕಗಳ ಮರುಎಣಿಕೆ, ಉತ್ತರಪತ್ರಿಕೆಯ ಛಾಯಾಪ್ರತಿ ಮತ್ತು ಮರುಮೌಲ್ಯಮಾಪನಕ್ಕೆ ಅವಕಾಶ ಕಲ್ಪಿಸಲಾಗಿದೆ.ಮರು ಎಣಿಕೆಗೆ ಅರ್ಜಿ ಸಲ್ಲಿಸಿದ್ದಲ್ಲಿ, ಉತ್ತರಪತ್ರಿಕೆಯ ಛಾಯಾಪ್ರತಿ ಪಡೆಯಲು ಹಾಗೂ ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಲು ಅವಕಾಶ ಇರುವುದಿಲ್ಲ. ಉತ್ತರ ಪತ್ರಿಕೆಯ ಛಾಯಾಪ್ರತಿ ಪಡೆದವರಿಗೆ ಮಾತ್ರ ಮರು ಮೌಲ್ಯಮಾಪನಕ್ಕೆ ಅವಕಾಶ ಕಲ್ಪಿಸಲಾಗಿದೆ.ಉತ್ತರಪತ್ರಿಕೆಯ ಛಾಯಾ ಪ್ರತಿ ಪಡೆದ ನಂತರ ಮರು ಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸುವುದು.

ಫಲಿತಾಂಶ ಪ್ರಕಟವಾದ 15 ದಿನಗಳ ಒಳಗೆ ಅಂಕಗಳ ಮರುಎಣಿಕೆಗೆ ಅಥವಾ ಛಾಯಾಪ್ರತಿಗೆ ಅರ್ಜಿ ಸಲ್ಲಿಸತಕ್ಕದ್ದು.ಅರ್ಜಿಗಳನ್ನು ತಡವಾಗಿ ಕಳುಹಿಸಿದಲ್ಲಿ ಯಾವುದೇ ಕಾರಣಕ್ಕೂ ನೀವುNEFT ಚಲನ್ ಮೂಲಕ ಪಾವತಿಸಿದ ಶುಲ್ಕವನ್ನು ಹಿಂದಿರುಗಿಸಲಾಗುವುದಿಲ್ಲ. ಸಕಾಲದಲ್ಲಿ ಅರ್ಜಿಯನ್ನು ಸಲ್ಲಿಸದಿದ್ದಲ್ಲಿ ಸಂಬಂಧಿತ ಕಾಲೇಜುಗಳ ಪ್ರಾಂಶುಪಾಲರೇ ಜವಾಬ್ದಾರರಾಗಿರುತ್ತಾರೆ.ಉತ್ತರಪತ್ರಿಕೆಯ ಛಾಯಾ ಪ್ರತಿ ಪಡೆದ 07 ದಿನಗಳ ಒಳಗೆ ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸತಕ್ಕದ್ದು.

1. ಮರು ಎಣಿಕೆಗೆ ಪ್ರತಿ ವಿಷಯಕ್ಕೆ ಶುಲ್ಕ – 150/-ರೂಗಳು
2. ಉತ್ತರ ಪತ್ರಿಕೆಯ ಛಾಯಾ ಪ್ರತಿ ವಿಷಯಕ್ಕೆ ಶುಲ್ಕ -300/-ರೂಗಳು
3. ಮರುಮೌಲ್ಯಮಾಪನಕ್ಕೆ ಪ್ರತಿ ವಿಷಯಕ್ಕೆ ಶುಲ್ಕ-700/-ರೂಗಳು

ಹೆಚ್ಚಿನ ವಿವರಗಳಿಗೆ ಮಂಡಳಿಯಿಂದ ಕಳುಹಿಸಿರುವ ಅರ್ಜಿಗಳ ಹಿಂಭಾಗದಲ್ಲಿ ನಮೂದಿಸಿರುವ ಸೂಚನೆಗಳನ್ನು ಓದಿಕೊಳ್ಳತಕ್ಕದ್ದು.

ಶುಲ್ಕವನ್ನು NEFTಚಲನ್ ಮೂಲಕ ಪಾವತಿಸಿ ಅರ್ಜಿಯೊಂದಿಗೆ ಸಲ್ಲಿಸುವುದು. ಅರ್ಜಿಯಲ್ಲಿ ಅಭ್ಯರ್ಥಿಯ ಹೆಸರು ನೋಂದಣಿ ಸಂಖ್ಯೆ ಕೇಂದ್ರ ಸಂಖ್ಯೆ ಮುಂತಾದ ಮಾಹಿತಿಯನ್ನು ಸರಿಯಾಗಿ ನಮೂದಿಸತಕ್ಕದ್ದು.

(ಮಾನ್ಯ ನಿರ್ದೇಶಕರಿಂದ ಕರಡು ಅನುಮೋದಿಸಿದೆ.)

ಸಹಿ/-
ನಿರ್ದೇಶಕರು
(ಇತರೆ ಪರೀಕ್ಷೆಗಳು)

**ಇವರಿಗೆ**

1. ರಾಜ್ಯದ ಎಲ್ಲಾ ಹಿಂದಿ ಶಿಕ್ಷಕ್ ತರಬೇತಿ ವಿದ್ಯಾಲಯಗಳ ಪ್ರಾಂಶುಪಾಲರುಗಳಿಗೆ
2. ನಿರ್ದೇಶಕರು/ಕಾರ್ಯದರ್ಶಿಗಳ ಆಪ್ತಶಾಖೆಗೆ
3. ಕಛೇರಿ ಪ್ರತಿ